YK ಎಸ್.ಎಸ್.ಎಲ್.ಸಿ

Yakub Koyyur
GHS nada
Belthangady taluk
D.K. – 574214
Email:
yhokkila@gmail.com

ಗಣಿತ

ಕನ್ನಡ ಮಾಧ್ಯಮ

ಭಾಗ –2

ಸಂಪೂರ್ಣಪರಿಹಾರ

ಹೊಸ ಪಠ್ಯ ಆಧಾರಿತ

Available in:ykoyyur.blogspot.com

ಪರಿವಿಡಿ

ಭಾಗ –1

9 ಬಹುಪದೋಕ್ತಿಗಳು

ಮಹತ್ತಮ ಘಾತ ಅಥವಾ ಡಿಗ್ರಿ

$p(x)$ ಎಂಬುದು x ಎಂಬ ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾದರೆ, $p(x)$ ದಲ್ಲಿನ x ದ ಗರಿಷ್ಠ ಘಾತಸೂಚಿಯನ್ನು ಆ ಬಹುಪದೋಕ್ತಿ $p(x)$ನ ಮಹತ್ತಮ ಘಾತ ಅಥವಾ ಡಿಗ್ರಿ ಎನ್ನುತ್ತಾರೆ.

ಉದಾಹರಣೆಗೆ,

$4x + 2$ ಎಂಬುದು x ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು, ಇದರ ಡಿಗ್ರಿ 1 ಆಗಿದೆ.
ಡಿಗ್ರಿ 1 ಆಗಿರುವ ಬಹುಪದೋಕ್ತಿಗೆ **ರೇಖಾತ್ಮಕ ಬಹುಪದೋಕ್ತಿ** ಎನ್ನುತ್ತಾರೆ.

$2y^2 - 3y + 4$ ಎಂಬುದು y ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು, ಇದರ ಡಿಗ್ರಿ 2 ಆಗಿದೆ.
ಡಿಗ್ರಿ 2 ಆಗಿರುವ ಬಹುಪದೋಕ್ತಿಯನ್ನು **ವರ್ಗ ಬಹುಪದೋಕ್ತಿ** ಎನ್ನುತ್ತಾರೆ.

x ಎಂಬ ಚರಾಕ್ಷರವುಳ್ಳ ಯಾವುದೇ ವರ್ಗ ಬಹುಪದೋಕ್ತಿಯು $ax^2 + bx + c$ ರೂಪದಲ್ಲಿರುತ್ತದೆ.
ಇಲ್ಲಿ a, b, c ಗಳು ವಾಸ್ತವ ಸಂಖ್ಯೆಗಳಾಗಿದ್ದು, $a \neq 0$ ಆಗಿದೆ.

$5x^3 - 4x^2 + 2 - \sqrt{2}$ ಎಂಬುದು x ಚರಾಕ್ಷರುವುಳ್ಳ ಒಂದು ಬಹುಪದೋಕ್ತಿಯಾಗಿದ್ದು ಇದರ ಡಿಗ್ರಿ 3 ಆಗಿದೆ.
ಡಿಗ್ರಿ 3 ಆಗಿರುವ ಬಹುಪದೋಕ್ತಿಯನ್ನು **ಘನ ಬಹುಪದೋಕ್ತಿ** ಎನ್ನುತ್ತಾರೆ.

ಒಂದು ಘನ ಬಹುಪದೋಕ್ತಿಯ ಸಾಮಾನ್ಯ ರೂಪವು $ax^3 + bx^2 + cx + d$
ಇಲ್ಲಿ a, b, c, d ಗಳು ವಾಸ್ತವ ಸಂಖ್ಯೆಗಳು ಮತ್ತು $a \neq 0$ ಆಗಿದೆ.

[$7u^6 - \frac{3}{2}u^4 + 4u^2 + u - 8$ ಎಂಬುದು u ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು, ಇದರ ಡಿಗ್ರಿ 6 ಆಗಿದೆ.]

ಚರಾಕ್ಷರವು ಋಣಾತ್ಮಕ ಘಾತ ಹೊಂದಿದ್ದರೆ ಅಥವಾ ಅದರ ಘಾತಾಂಕವು ಪೂರ್ಣಾಂಕ ಅಲ್ಲದಿದ್ದರೆ ಅದು ಬಹುಪದೋಕ್ತಿ ಆಗಿರುವುದಿಲ್ಲ.

ಉದಾಹರಣೆ: $\sqrt{x} + 1$, $\frac{2}{x}$, $\frac{1}{x^3+x^2-1}$

$p(x)$ ಎಂಬುದು x ನ ಬಹುಪದೋಕ್ತಿಯಾಗಿದ್ದು ಮತ್ತು k ಎಂಬುದು ಯಾವುದೇ ವಾಸ್ತವ ಸಂಖ್ಯೆ ಆಗಿದ್ದರೆ, $p(x)$ ನಲ್ಲಿ x ಗೆ k ಯನ್ನು ಆದೇಶಿಸಿದಾಗ ದೊರೆಯುವ ಬೆಲೆಯನ್ನು $x = k$ ಆದಾಗ $p(x)$ ನ ಬೆಲೆ ಎನ್ನುತ್ತೇವೆ ಹಾಗೂ ಅದನ್ನು $p(k)$ ಎಂದು ಸೂಚಿಸುತ್ತೇವೆ.

ಉದಾಹರಣೆ: $x = -1$ ಆದಾಗ $p(x) = x^2 - 3x - 4$ ಇದರ ಬೆಲೆ ಎಷ್ಟು?

$p(-1) = (-1)^2 - 3(-1) - 4 = 0$

ಹಾಗೆಯೇ, $p(4) = (4)2 - 3(4) - 4 = 0$

$p(-1) = 0$ ಮತ್ತು $p(4) = 0$ ಆಗಿರುವುದರಿಂದ, -1 ಮತ್ತು 4ನ್ನು ಎಂಬ $x^2 - 3x - 4$ ವರ್ಗಬಹುಪದೋಕ್ತಿಯ ಶೂನ್ಯತೆಗಳು ಎನ್ನುತ್ತೇವೆ.

k ಯು ಒಂದು ವಾಸ್ತವ ಸಂಖ್ಯೆಯಾಗಿದ್ದು, $p(k) = 0$ ಆದರೆ k ಯನ್ನು ಬಹುಪದೋಕ್ತಿ $p(x)$ ನ ಶೂನ್ಯತೆ ಎಂದು ಕರೆಯುತ್ತೇವೆ.

k ಎಂಬುದು $p(x) = ax + b$ ಯ ಶೂನ್ಯತೆಯಾದರೆ, ಆಗ $p(k) = ak + b = 0$ ಅಂದರೆ $k = -\frac{b}{a}$

ರೇಖಾತ್ಮಕ ಬಹುಪದೋಕ್ತಿ $ax + b$ ಯ ಶೂನ್ಯತೆಯು $-\frac{b}{a}$

9.2 ಬಹುಪದೋಕ್ತಿಯ ಶೂನ್ಯತೆಗಳ ರೇಖಾಗಣಿತೀಯ ಅರ್ಥ:

k ಎಂಬುದು ಒಂದು ವಾಸ್ತವ ಸಂಖ್ಯೆಯಾಗಿದ್ದು $p(x)$ ಎಂಬುದು ಒಂದು ಬಹುಪದೋಕ್ತಿ ಆದಾಗ $p(k) = 0$ ಆದರೆ k ಯನ್ನು ಬಹುಪದೋಕ್ತಿ $p(x)$ ನ ಶೂನ್ಯತೆ ಎನ್ನುತ್ತಾರೆ. ಒಂದು ಬಹುಪದೋಕ್ತಿಯ ಶೂನ್ಯತೆಗಳು ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆದಿವೆ.

(i) ರೇಖಾತ್ಮಕ ಬಹುಪದೋಕ್ತಿ

ಉದಾಹರಣೆ: $y = 2x + 3$

x	-2	2
y	-1	7

$y = 2x + 3$ರ ನಕ್ಷೆಯು $(-2, -1)$ ಮತ್ತು $(2, 7)$ ಈ ಬಿಂದುಗಳಮೂಲಕ ಹಾದುಹೋಗುವ ಒಂದು ಸರಳರೇಖೆಯಾಗಿದೆ.

$y = 2x + 3$ ರ ನಕ್ಷೆಯು x – ಅಕ್ಷವನ್ನು $\left(\frac{-3}{2}, 0\right)$ ಬಿಂದುವಿನಲ್ಲಿ ಛೇದಿಸುತ್ತದೆ.

$\therefore \frac{-3}{2}$ ಎಂಬುವುದು $y = 2x + 3$ ರ ಶೂನ್ಯತೆಯಾಗಿದೆ.

∴ಒಂದು ರೇಖಾತ್ಮಕ ಬಹುಪದೋಕ್ತಿ $ax + b$ $(a \neq 0)$ ಎಂಬುದು ಕೇವಲ ಒಂದೇ ಒಂದು ಶೂನ್ಯತೆಯನ್ನು ಹೊಂದಿದ್ದು, ಇದು $y = ax + b$ ನಕ್ಷೆಯು x– ಅಕ್ಷವನ್ನು ಛೇದಿಸುವ ಬಿಂದುವಿನ x ನಿರ್ದೇಶಾಂಕವಾಗಿರುತ್ತದೆ.



(i) ವರ್ಗಾತ್ಮಕ ಬಹುಪದೋಕ್ತಿ

ಉದಾಹರಣೆ: $y = x^2 - 3x - 4$

x	-2	-1	0	1	2	3	4	5
y	6	0	-4	-6	-6	-4	0	6

ಈ ಬಿಂದುಗಳನ್ನು ನಕ್ಷೆಯಲ್ಲಿ ಗುರುತಿಸಿದಾಗ ನಾವು ವಕ್ರ ರೇಖೆಯನ್ನು ಪಡೆಯುತ್ತೇವೆ. ಅದು ಮೇಲ್ಮುಖವಾಗಿರಬಹುದು ಇಲ್ಲವೇ ಕೆಳಮುಖವಾಗಿರಬಹುದು. ಅಂತಹ ರೇಖೆಯನ್ನು ಪರವಲಯ ಎನ್ನುತ್ತೇವೆ. $y = x^2 - 3x - 4$ರ ನಕ್ಷೆಯು x ಅಕ್ಷವನ್ನು ಛೇದಿಸುವ ಬಿಂದುಗಳ x ನಿರ್ದೇಶಾಂಕಗಳು –1 ಮತ್ತು 4 ಆಗಿವೆ.ವರ್ಗ ಬಹುಪದೋಕ್ತಿ $x^2 - 3x - 4$ ರ ಶೂನ್ಯತೆಗಳು $y = x^2 - 3x - 4$ ರ ನಕ್ಷೆಯು x - ಅಕ್ಷವನ್ನು ಛೇದಿಸುವ ಬಿಂದುಗಳ x – ನಿರ್ದೇಶಾಂಕಗಳಾಗಿವೆ. ಒಂದು ವರ್ಗ ಬಹುಪದೋಕ್ತಿ $ax^2 + bx + c, (a \neq 0)$ ಯ ಶೂನ್ಯತೆಗಳು ನಿಖರವಾಗಿಯೂ $y = ax^2 + bx + c$ ಯನ್ನು ಪ್ರತಿನಿಧಿಸುವ ಪರವಲಯವು x – ಅಕ್ಷವನ್ನು ಛೇದಿಸುವ ಬಿಂದುಗಳ x - ನಿರ್ದೇಶಾಂಕಗಳಾಗಿರುತ್ತವೆ.





ಚಿತ್ರ 9.3



ಚಿತ್ರ 9.4



ಚಿತ್ರ 9.5

ಪ್ರಕರಣ (i): ಇಲ್ಲಿ, ನಕ್ಷೆಯು x - ಅಕ್ಷವನ್ನು ಎರಡು ಪ್ರತ್ಯೇಕ ಬಿಂದುಗಳಲ್ಲಿ ಛೇದಿಸುತ್ತದೆ. ಇವು $ax^2 + bx + c$ ಯ ಎರಡು ಶೂನ್ಯತೆಗಳಾಗಿವೆ (ಚಿತ್ರ 9.3ನ್ನು ನೋಡಿ).

ಪ್ರಕರಣ (ii) : ಇಲ್ಲಿ, ನಕ್ಷೆಯು x - ಅಕ್ಷವನ್ನು ನಿಖರವಾಗಿ ಒಂದು ಬಿಂದುವಿನಲ್ಲಿ ಛೇದಿಸುತ್ತದೆ. ಅಂದರೆ ಪರಸ್ಪರ ಐಕ್ಯವಾಗುವ ಎರಡು ಬಿಂದುಗಳು.(ಚಿತ್ರ 9.4ನೋಡಿ) ಆದ್ದರಿಂದ ಪ್ರಕರಣ (i)ರ ಎರಡು ಬಿಂದುಗಳು ಇಲ್ಲಿ ಪರಸ್ಪರ ಐಕ್ಯವಾಗಿ ಒಂದು ಬಿಂದು ಆಗುತ್ತದೆ. ಈ ಪ್ರಕರಣದಲ್ಲಿ ವರ್ಗ ಬಹುಪದೋಕ್ತಿ $ax^2 + bx + c$ ಗೆ ಒಂದೇ ಒಂದು ಶೂನ್ಯತೆ ಆಗಿರುತ್ತದೆ.

ಪ್ರಕರಣ (iii): ಇಲ್ಲಿ ನಕ್ಷೆಯು ಸಂಪೂರ್ಣವಾಗಿ x - ಅಕ್ಷದ ಮೇಲ್ಭಾಗದಲ್ಲಿರುತ್ತದೆ ಅಥವಾ ಸಂಪೂರ್ಣವಾಗಿ x - ಅಕ್ಷದ ಕೆಳಭಾಗದಲ್ಲಿರುತ್ತದೆ. ಆದ್ದರಿಂದ, ಅದು x - ಅಕ್ಷವನ್ನು ಯಾವುದೇ ಬಿಂದುವಿನಲ್ಲಿ ಛೇದಿಸುವುದಿಲ್ಲ (ಚಿತ್ರ 9.5ನ್ನು ನೋಡಿ). ಈ ಪ್ರಕರಣದಲ್ಲಿ ವರ್ಗ ಬಹುಪದೋಕ್ತಿ $ax^2 + bx + c$ ಯು ಯಾವುದೇ ಶೂನ್ಯತೆಯನ್ನು ಹೊಂದಿರುವುದಿಲ್ಲ.

ಒಂದು ವರ್ಗ ಬಹುಪದೋಕ್ತಿಯು ಎರಡು ಪ್ರತ್ಯೇಕ ಶೂನ್ಯತೆಗಳನ್ನು ಹೊಂದಿರಬಹುದು ಅಥವಾ ಎರಡು ಸಮನಾದ ಶೂನ್ಯತೆಗಳನ್ನು (ಅಂದರೆ ಒಂದೇ ಶೂನ್ಯತೆ) ಹೊಂದಿರಬಹುದು ಅಥವಾ ಶೂನ್ಯತೆಯನ್ನು ಹೊಂದಿಲ್ಲದೇ ಇರಬಹುದು. ಇದರಿಂದ ಡಿಗ್ರಿ 2 ಆಗಿರುವ ಒಂದು ಬಹುಪದೋಕ್ತಿಯು ಗರಿಷ್ಠ 2 ಶೂನ್ಯತೆಗಳನ್ನು ಹೊಂದಿರಬಹುದು.

ಘನಾತ್ಮಕ ಬಹುಪದೋಕ್ತಿ

ಉದಾಹರಣೆ: $y = x^3 - 4x$

x	-2	-1	0	1	2
y	0	3	0	-3	0

ಮೇಲಿನ ಕೋಷ್ಟಕದಿಂದ −2, 0 ಮತ್ತು 2 ಇವು ಘನ ಬಹುಪದೋಕ್ತಿ $x^3 - 4x$ ದ ಶೂನ್ಯತೆಗಳಾಗಿವೆ. −2, 0 ಮತ್ತು 2 ಇವು ವಾಸ್ತವವಾಗಿ $y= x^3-4x$ದ ನಕ್ಷೆಯು x – ಅಕ್ಷವನ್ನು ಛೇದಿಸುವ ಬಿಂದುಗಳ X – ನಿರ್ದೇಶಾಂಕಗಳಾಗಿವೆ. ವಕ್ರರೇಖೆಯು x – ಅಕ್ಷವನ್ನು ಈ ಮೂರು ಬಿಂದುಗಳಲ್ಲಿ ಮಾತ್ರ ಛೇದಿಸಿರುವುದರಿಂದ ಅವುಗಳ x –ನಿರ್ದೇಶಾಂಕಗಳು ಮಾತ್ರ ಬಹುಪದೋಕ್ತಿಯ ಶೂನ್ಯತೆಗಳಾಗಿವೆ.



ಚಿತ್ರ 9.6

ಚಿತ್ರ 9.7ರಲ್ಲಿ $y = x^3 – x^2$ ಮತ್ತು ಚಿತ್ರ 9.8ರಲ್ಲಿ $y = x^3$ನ ನಕ್ಷೆಗಳನ್ನು ರಚಿಸಲಾಗಿದೆ. $y = x^3$ ನ ನಕ್ಷೆಯು x –ಅಕ್ಷವನ್ನು ಏಕೈಕ ಬಿಂದುವಿನಲ್ಲಿ ಛೇದಿಸುತ್ತದೆ. $y = x^3 – x^2$ ನಕ್ಷೆಯು x –ಅಕ್ಷವನ್ನು ಎರಡು ಬಿಂದುಗಳಲ್ಲಿ ಛೇದಿಸುತ್ತದೆ.



ಚಿತ್ರ 9.7



ಚಿತ್ರ 9.8

ಮೇಲಿನ ಉದಾಹರಣೆಗಳಿಂದ, ಯಾವುದೇ ಘನ ಬಹುಪದೋಕ್ತಿಗೆ ಗರಿಷ್ಠ 3 ಶೂನ್ಯತೆಗಳಿರುತ್ತವೆ ಎಂದು ತಿಳಿಯಬಹುದು. ಆದ್ದರಿಂದ ಡಿಗ್ರಿ 3 ಆಗಿರುವ ಯಾವುದೇ ಬಹುಪದೋಕ್ತಿಯು ಗರಿಷ್ಠ 3 ಶೂನ್ಯತೆಗಳನ್ನು ಹೊಂದಿರುತ್ತದೆ.

ಉದಾಹರಣೆ 1: ಕೆಳಗೆ ನೀಡಿದ ಚಿತ್ರ 9.9ರಲ್ಲಿನ ನಕ್ಷೆಗಳನ್ನು ನೋಡಿ. ಪ್ರತಿಯೊಂದೂ ಸಹ $y = p(x)$ ದ ನಕ್ಷೆಯಾಗಿದ್ದು, ಇಲ್ಲಿ $p(x)$ ಎಂಬುದು ಬಹುಪದೋಕ್ತಿಯಾಗಿದೆ. ಪ್ರತಿಯೊಂದು ನಕ್ಷೆಗೂ $p(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.



(i)



(ii)



(iii)



(iv)



(v)



(vi)

ಪರಿಹಾರ:

(i) ನಕ್ಷೆಯು x - ಅಕ್ಷವನ್ನು ಒಂದು ಬಿಂದುವಿನಲ್ಲಿ ಮಾತ್ರ ಛೇದಿಸುವುದರಿಂದ ಅದು ಕೇವಲ ಒಂದು ಶೂನ್ಯತೆಯನ್ನು ಮಾತ್ರ ಹೊಂದಿದೆ.

(ii) ನಕ್ಷೆಯು x - ಅಕ್ಷವನ್ನು ಎರಡು ಬಿಂದುಗಳಲ್ಲಿ ಛೇದಿಸುವುದರಿಂದ ಇಲ್ಲಿ ಶೂನ್ಯತೆಗಳ ಸಂಖ್ಯೆ 2 ಆಗಿದೆ

(iii) ಶೂನ್ಯತೆಗಳ ಸಂಖ್ಯೆ 3 ಆಗಿದೆ. ಏಕೆಂದರೆ ನಕ್ಷೆಯು x ಅಕ್ಷವನ್ನು ಮೂರು ಬಿಂದುಗಳಲ್ಲಿ ಛೇದಿಸುತ್ತದೆ.

(iv) ಶೂನ್ಯತೆಗಳ ಸಂಖ್ಯೆ 1 ಆಗಿದೆ. ಏಕೆಂದರೆ ನಕ್ಷೆಯು x ಅಕ್ಷವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುತ್ತದೆ.

(v) ಶೂನ್ಯತೆಗಳ ಸಂಖ್ಯೆ 1 ಆಗಿದೆ. ಏಕೆಂದರೆ ನಕ್ಷೆಯು x ಅಕ್ಷವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುತ್ತದೆ.

(vi) ಶೂನ್ಯತೆಗಳ ಸಂಖ್ಯೆ 4 ಆಗಿದೆ. ಏಕೆಂದರೆ ನಕ್ಷೆಯು x ಅಕ್ಷವನ್ನು ನಾಲ್ಕು ಬಿಂದುಗಳಲ್ಲಿ ಛೇದಿಸುತ್ತದೆ.

ಅಭ್ಯಾಸ 9.1

1. $y = p(x)$ ದ ನಕ್ಷೆಗಳನ್ನು ಕೆಳಗೆ ಚಿತ್ರ 9.10ರಲ್ಲಿ ನೀಡಿದ್ದು, ಇಲ್ಲಿ $p(x)$ ಎಂಬುದು ಬಹುಪದೋಕ್ತಿಯಾಗಿದೆ. ಪ್ರತಿ ಸಂದರ್ಭದಲ್ಲಿಯೂ $p(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.



Fig. 9.10

ಪರಿಹಾರ

2. $y = p(x)$ ದ ನಕ್ಷೆಗಳನ್ನು ಕೆಳಗೆ ಚಿತ್ರ 9.10ರಲ್ಲಿ ನೀಡಿದ್ದು, ಇಲ್ಲಿ $p(x)$ ಎಂಬುದು ಬಹುಪದೋಕ್ತಿಯಾಗಿದೆ. ಪ್ರತಿ ಸಂದರ್ಭದಲ್ಲಿಯೂ $p(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.



Fig. 9.10

(i) ಬಹುಪದೋಕ್ತಿಯ ಶೂನ್ಯತೆ 0 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ಯಾವುದೇ ಬಿಂದುವಿನಲ್ಲಿ ಛೇದಿಸುವುದಿಲ್ಲ.
(ii) ಬಹುಪದೋಕ್ತಿಯ ಶೂನ್ಯತೆ 1 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುತ್ತದೆ.
(iii)ಬಹುಪದೋಕ್ತಿಯ ಶೂನ್ಯತೆ 3 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ಎರಡು ಬಿಂದುಗಳಲ್ಲಿ ಛೇದಿಸುತ್ತದೆ.
(iv)ಬಹುಪದೋಕ್ತಿಯ ಶೂನ್ಯತೆ 2 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ಮೂರು ಬಿಂದುಗಳಲ್ಲಿ ಛೇದಿಸುತ್ತದೆ.
(v) ಬಹುಪದೋಕ್ತಿಯ ಶೂನ್ಯತೆ 4 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ನಾಲ್ಕು ಬಿಂದುಗಳಲ್ಲಿ ಛೇದಿಸುತ್ತದೆ.
(vi)ಬಹುಪದೋಕ್ತಿಯ ಶೂನ್ಯತೆ 3 ಆಗಿದೆ. ಏಕೆಂದರೆ ನಕ್ಷೆಯು x-ಅಕ್ಷವನ್ನು ಮೂರು ಬಿಂದುಗಳಲ್ಲಿ ಛೇದಿಸುತ್ತದೆ.

9.3. ಬಹುಪದೋಕ್ತಿಯ ಶೂನ್ಯತೆಗಳು ಹಾಗೂ ಸಹಗುಣಕಗಳ ನಡುವಿನ ಸಂಬಂಧ

α ಮತ್ತು β ಗಳು ವರ್ಗ ಬಹುಪದೋಕ್ತಿ $p(x) = ax^2 + bx + c$, $a \neq 0$ ಯ ಶೂನ್ಯತೆಗಳಾಗಿದ್ದರೆ, $(x - \alpha)$ ಮತ್ತು $(x - \beta)$ ಗಳು $p(x)$ದ ಅಪವರ್ತನಗಳಾಗಿರುತ್ತವೆ.

ಶೂನ್ಯತೆಗಳ ಮೊತ್ತ $\boxed{\alpha + \beta = \frac{-b}{a}}$ ಶೂನ್ಯತೆಗಳ ಗುಣಲಬ್ಧ $\boxed{\alpha\beta = \frac{c}{a}}$

ಉದಾಹರಣೆ 2: $x^2 + 7x + 10$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

ಪರಿಹಾರ: $x^2 + 7x + 10 = x^2 + 5x + 2x + 10$

$= x(x + 5) + 2(x + 5)$

$= (x + 2)(x + 5)$

$\therefore x = -2$ ಅಥವಾ $x = -5$ ಆದಾಗ $x^2 + 7x + 10$ ರ ಬೆಲೆಯು ಸೊನ್ನೆಯಾಗುತ್ತದೆ.

ಆದ್ದರಿಂದ, -2 ಮತ್ತು -5 ಇವು $x^2 + 7x + 10$ ರ ಶೂನ್ಯತೆಗಳಾಗಿವೆ.

ಶೂನ್ಯತೆಗಳ ಮೊತ್ತ $= (-2) + (-5) = -7 = \frac{-7}{1} = \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= (-2) \times (-5) = 10 = \frac{10}{1} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

ಉದಾಹರಣೆ 3: $x^2 - 3$ ಎಂಬ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

ಪರಿಹಾರ: $a^2 - b^2 = (a - b)(a + b)$

$\therefore x^2 - 3 = (x - \sqrt{3})(x + \sqrt{3})$

ಆದ್ದರಿಂದ, $\sqrt{3}$ ಮತ್ತು $-\sqrt{3}$ ಇವು $x^2 - 3$ ರ ಶೂನ್ಯತೆಗಳಾಗಿವೆ.

ಈಗ, ಶೂನ್ಯತೆಗಳ ಮೊತ್ತ $= \sqrt{3} + -\sqrt{3} = 0 = \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= (\sqrt{3})(-\sqrt{3}) = -3 = \frac{-3}{1} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

ಉದಾಹರಣೆ 4: ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧಗಳು ಕ್ರಮವಾಗಿ -3 ಮತ್ತು 2 ಆಗಿರುವ ಒಂದು ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

ಪರಿಹಾರ: $ax^2 + bx + c$ ಯು ಅಪೇಕ್ಷಿತ ವರ್ಗ ಬಹುಪದೋಕ್ತಿಯಾಗಿರಲಿ ಹಾಗೂ α ಮತ್ತು βಗಳು ಅದರ ಶೂನ್ಯತೆಗಳಾಗಿರಲಿ.

$\therefore \alpha + \beta = -3 = \frac{-b}{a}$ ಮತ್ತು $\alpha\beta = 2 = \frac{c}{a}$

$\Rightarrow a = 1$ ಆದರೆ, ಆಗ $b = 3$ ಮತ್ತು $c = 2$

ವರ್ಗ ಬಹುಪದೋಕ್ತಿ $= x^2 + 3x + 2$

ಘನ ಬಹುಪದೋಕ್ತಿಯ ಶೂನ್ಯತೆಗಳು ಮತ್ತು ಅದರ ಸಹಗುಣಕಗಳ ನಡುವೆ ಸಂಬಂಧ:

α, β, γ ಗಳು $ax^3 + bx^2 + cx + d$ ಎಂಬ ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ, ಆಗ,

$$\alpha + \beta + \gamma = \frac{-b}{a}; \quad \alpha\beta + \beta\gamma + \gamma\alpha = \frac{c}{a}; \quad \alpha\beta\gamma = \frac{-d}{a}$$

ಅಭ್ಯಾಸ 9.2

1. ಈ ಕೆಳಗಿನ ವರ್ಗ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

   (i) $x^2 - 2x - 8$ (ii) $4s^2 - 4s - 1$ (iii) $6x^2 - 3 - 7x$

   (iv) $4u^2 - 8u$ (v) $t^2 - 15$ (vi) $3x^2 - x - 4$

2. ಈ ಕೆಳಗಿನವುಗಳನ್ನು ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವನ್ನಾಗಿ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

   (i) $\frac{1}{4}, -1$ (ii) $\sqrt{2}, \frac{1}{3}$ (iii) $0, \sqrt{5}$

   (iv) $1, 1$ (v) $\frac{1}{4}, -\frac{1}{4}$ (vi) $4, 1$

ಪರಿಹಾರ

1. ಈ ಕೆಳಗಿನ ವರ್ಗ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

(i) $x^2 - 2x - 8$ (ii) $4s^2 - 4s - 1$ (iii) $6x^2 - 3 - 7x$

(iv) $4u^2 - 8u$ (v) $t^2 - 15$ (vi) $3x^2 - x - 4$

(i) $x^2 - 2x - 8$

$= x^2 - 4x + 2x - 8$

$= (x - 4) + 2(x - 4)$

$= (x - 4)(x + 2)$

$\Rightarrow x = 4$ ಮತ್ತು $x = -2$ ಗಳು $x^2 - 2x - 8$ ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ $= 4 + (-2) = 2 = \frac{-(-2)}{1} = \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= (4))(-2) = -8 = \frac{-8}{1} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

(ii) $4s^2 - 4s + 1$

$= 4s^2 - 2s - 2s + 1$

$= 2s(s - 1) - 1(2s - 1)$

$= (2s - 1)(2s - 1)$

$\Rightarrow s = \frac{1}{2}$ ಮತ್ತು $s = \frac{1}{2}$ಗಳು $4s^2 - 4s + 1$ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ $= \frac{1}{2} + \frac{1}{2} = 1 = \frac{-(-4)}{4} = \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= \frac{1}{2} \times \frac{1}{2} = \frac{1}{4} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

(iii) $6x^2 - 3 - 7x$

$= 6x^2 - 7x - 3$

$= 6x^2 - 9x + 2x - 3$

$= 3x(2x - 3) + 1(2x - 3)$

$= (3x + 1)(2x - 3)$

$\Rightarrow x = -\frac{1}{3}$ ಮತ್ತು $x = \frac{3}{2}$ಗಳು $6x^2 - 3 - 7x$ ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ $= -\frac{1}{3} + \frac{3}{2} = 1 = \frac{-2+9}{6} = \frac{7}{6} = \frac{-(-7)}{6}\ \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= -\frac{1}{3} \times \frac{3}{2} = \frac{-3}{6} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

(iv) $4u^2 + 8u$

$= 4u^2 + 8u + 0$

$= 4u(u + 2)$

$\Rightarrow u = 0$ ಮತ್ತು $u = -2$ ಗಳು $4u^2 + 8u$ ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ $= 0 + (-2) = -2 = \frac{-(8)}{4} = \frac{-x\text{ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= 0 \times -2 = 0 = \frac{0}{4} = \frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

(v) $t^2 - 15$

$= t^2 - 0.t - 15$

$= (t - \sqrt{15})(t + \sqrt{15})$

$\Rightarrow t = \sqrt{15}$ ಮತ್ತು $t = -\sqrt{15}$ ಗಳು $t^2 - 15$ ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ = $\sqrt{15}$ + (-$\sqrt{15}$) = 0 = $\frac{0}{1}$ = $\frac{-\text{x ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ = $\sqrt{15}$ x (-$\sqrt{15}$)= -15 = $\frac{-15}{1}$ = $\frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

(vi) $3x^2 - x - 4$

$= 3x^2 - 4x + 3x - 4$

$= x(3x - 4)+1(3x - 4)$

$= (3x - 4)(x + 1)$

$\Rightarrow x = \frac{4}{3}$ ಮತ್ತು $x = -1$ ಗಳು $3x^2 - x - 4$ ಬಹುಪದೋಕ್ತಿಯ ಶೂನ್ಯತೆಗಳು.

ಶೂನ್ಯತೆಗಳ ಮೊತ್ತ = $\frac{4}{3}$ + (-1) = $\frac{4-3}{3}$ = $\frac{1}{3}$ = $\frac{-(-1)}{3}$ $\frac{-\text{x ನ ಸಹಗುಣಕ}}{x^2\text{ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ = $\frac{4}{3}$ + (-1) = -$\frac{4}{3}$ = $\frac{-4}{1}$ = $\frac{\text{ಸ್ಥಿರಾಂಕ}}{x^2\text{ದ ಸಹಗುಣಕ}}$

2. ಈ ಕೆಳಗಿನವುಗಳನ್ನು ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವನ್ನಾಗಿ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

(i) $\frac{1}{4}$, -1 (ii) $\sqrt{2}$, $\frac{1}{3}$ (iii) 0, $\sqrt{5}$

(iv) 1, 1 (v) $-\frac{1}{4}$, $\frac{1}{4}$ (vi) 4, 1

(i) $\frac{1}{4}$, -1

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು ß ಆಗಿರಲಿ.

$\alpha + ß = \frac{1}{4} = \frac{-(-1)}{4} = \frac{-b}{a}$

$\alpha ß = -1 = \frac{-4}{4} = \frac{c}{a}$

$\Rightarrow a = 4, b = -1$ ಮತ್ತು $c = -4$

∴ ಅಪೇಕ್ಷಿತ ಬಹುಪದೋಕ್ತಿ $4x^2 - x - 4$

(ii) $\sqrt{2}$, $\frac{1}{3}$

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು ß ಆಗಿರಲಿ.

$\alpha + ß = \sqrt{2} = \frac{-(3\sqrt{2})}{3} = \frac{-b}{a}$

$\alpha ß = \frac{1}{3} = \frac{c}{a}$

$\Rightarrow a = 3, b = -3\sqrt{2}$ ಮತ್ತು $c = 1$

∴ ಅಪೇಕ್ಷಿತ ಬಹುಪದೋಕ್ತಿ $3x^2 - 3\sqrt{2} + 1$

(iii) 0, $\sqrt{5}$

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು ß ಆಗಿರಲಿ.

$\alpha + ß = 0 = \frac{0}{4} = \frac{-b}{a}$

$\alpha ß = \sqrt{5} = \frac{\sqrt{5}}{1} = \frac{c}{a}$

$\Rightarrow a = 1, b = 0$ ಮತ್ತು $c = \sqrt{5}$

∴ ಅಪೇಕ್ಷಿತ ಬಹುಪದೋಕ್ತಿ $x^2 + \sqrt{5}$

(iv) 1, 1

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು ß ಆಗಿರಲಿ.

$\alpha + \beta = 1 = \frac{-(-1)}{1} = \frac{-b}{a}$

$\alpha\beta = 1 = \frac{1}{1} = \frac{c}{a}$

$\Rightarrow a = 1, b = -1$ ಮತ್ತು $c = 1$

$\therefore$ ಅಪೇಕ್ಷಿತ ಬಹುಪದೋಕ್ತಿ $x^2 - x + 1$

(v) $-\frac{1}{4}, \frac{1}{4}$

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು β ಆಗಿರಲಿ.

$\alpha + \beta = -\frac{1}{4} = \frac{-1}{4} = \frac{-b}{a}$

$\alpha\beta = \frac{1}{4} = \frac{1}{4} = \frac{c}{a}$

$\Rightarrow a = 4, b = 1$ ಮತ್ತು $c = 1$

$\therefore$ ಅಪೇಕ್ಷಿತ ಬಹುಪದೋಕ್ತಿ $4x^2 + x + 1$

(vi) 4,1

ಅಪೇಕ್ಷಿತ ಬಹುಪದೋಕ್ತಿಯು $ax^2 + bx + c$ ಆಗಿರಲಿ ಮತ್ತು ಶೂನ್ಯತೆಗಳು α ಮತ್ತು β ಆಗಿರಲಿ.

$\alpha + \beta = 4 = \frac{-(-4)}{1} = \frac{-b}{a}$

$\alpha\beta = 1 = \frac{1}{1} = \frac{c}{a}$

$\Rightarrow a = 1, b = -4$ ಮತ್ತು $c = 1$

$\therefore$ ಅಪೇಕ್ಷಿತ ಬಹುಪದೋಕ್ತಿ $x^2 - 4x + 1$

9.4 ಬಹುಪದೋಕ್ತಿಗಳಿಗೆ ಭಾಗಾಕಾರ ಕ್ರಮವಿಧಿ

$x^3 - 3x^2 - x + 3$ ಇದರ ಒಂದು ಶೂನ್ಯತೆಯು 1 ಆದರೆ, ಅದರ ಒಂದು ಅಪವರ್ತನವು $(x - 1)$ ಆಗಿರುತ್ತದೆ. ಈಗ $x^3 - 3x^2 - x + 3$ ನ್ನು $(x - 1)$ ರಿಂದ ಭಾಗಿಸಿದಾಗ ಭಾಗಲಬ್ಧ $x^2 - 2x - 3$ ಆಗಿರುತ್ತದೆ. ಇದನ್ನು ಅಪವರ್ತಿಸಿದಾಗ, $x^3 - 3x^2 - x + 3$ ರ ಅಪವರ್ತನಗಳು $= (x - 1)(x + 1)(x - 3)$ ಆಗಿರುತ್ತದೆ.

ಆದ್ದರಿಂದ $x^3 - 3x^2 - x + 3$ ಬಹುಪದೋಕ್ತಿಯ ಶೂನ್ಯತೆಗಳು 1, –1 ಮತ್ತು 3 ಆಗಿರುತ್ತದೆ.

ಉದಾಹರಣೆ 6: $2x^2 + 3x + 1$ ನ್ನು $x + 2$ ರಿಂದ ಭಾಗಿಸಿ.

ಪರಿಹಾರ: ಶೇಷವು ಸೊನ್ನೆಯಾದಾಗ ಅಥವಾ ಶೇಷದ ಡಿಗ್ರಿಯು ಭಾಜಕದ ಡಿಗ್ರಿಗಿಂತ ಕಡಿಮೆ ಆದಾಗ ನಾವು ಭಾಗಾಕಾರ ಕ್ರಿಯೆಯನ್ನು ನಿಲ್ಲಿಸುತ್ತೇವೆ. ಆದ್ದರಿಂದ ಇಲ್ಲಿ ಭಾಗಲಬ್ಧವು $(2x - 1)$ ಮತ್ತು ಶೇಷವು 3 ಆಗಿದೆ.

$x + 2$	$2x^2 + 3x + 1$	$2x - 1$
	$2x^2 + 4x$	
	$- x + 1$	
	$- x - 2$	
	$+ 3$	

$(2x - 1)(x + 2) = 2x^2 + 3x - 2 + 3$

$= 2x^2 + 3x + 1$

⇒ಭಾಜ್ಯ = ಭಾಜಕ x ಭಾಗಲಬ್ಧ + ಶೇಷ

ಉದಾಹರಣೆ 7: $3x^3 + x^2 + 2x + 5$ ನ್ನು $1 + 2x + x^2$ ದಿಂದ ಭಾಗಿಸಿ.

$1 + 2x + x^2$	$3x^3 + x^2 + 2x + 5$	$3x - 5$
	$3x^3 + 6x^2 + 3x$	
	$-5x^2 - x + 5$ $-5x^2 - 10x - 5$	
	$9x + 10$	

ಭಾಜ್ಯ ಮತ್ತು ಭಾಜಕದ ಪದಗಳನ್ನು ಅವುಗಳ ಡಿಗ್ರಿಯ ಇಳಿಕೆ ಕ್ರಮದಲ್ಲಿ ಜೋಡಿಸುತ್ತೇವೆ. ಪದಗಳನ್ನು ಈ ರೀತಿಯಲ್ಲಿ ಜೋಡಿಸಿ ಬರೆಯುವುದನ್ನು, ಬಹುಪದೋಕ್ತಿಗಳನ್ನು ಆದರ್ಶ ರೂಪದಲ್ಲಿ ಬರೆಯುವುದು ಎನ್ನುತ್ತಾರೆ

$(x^2 + 2x + 1)(3x - 5) + (9x + 10) = 3x^3 + x^2 + 2x + 5$

$\Rightarrow$ಭಾಜ್ಯ = ಭಾಜಕ x ಭಾಗಲಬ್ಧ + ಶೇಷ

$p(x)$ ಮತ್ತು $g(x)$ ಗಳು ಯಾವುದೇ ಎರಡು ಬಹುಪದೋಕ್ತಿಗಳಾಗಿದ್ದು, $g(x) \neq 0$ ಆದಾಗ

$$\boxed{p(x) = g(x) \cdot q(x) + r(x)}$$

$q(x)$ ಭಾಗಲಬ್ಧ ಮತ್ತು $r(x)$ ಶೇಷ

ಇಲ್ಲಿ $r(x) = 0$ ಅಥವಾ $r(x)$ ದ ಡಿಗ್ರಿ < $g(x)$ ದ ಡಿಗ್ರಿ ಆಗಿರುತ್ತದೆ.

ಇದನ್ನು ಬಹುಪದೋಕ್ತಿಗಳಿಗೆ ಭಾಗಾಕಾರ ಕ್ರಮವಿಧಿ ಎನ್ನುತ್ತಾರೆ.

ಉದಾಹರಣೆ 8: $3x^2 - x^3 - 3x + 5$ ನ್ನು $x - 1 - x^2$ ರಿಂದ ಭಾಗಿಸಿ ಮತ್ತು ಭಾಗಾಕಾರ ಕ್ರಮವಿಧಿಯನ್ನು ತಾಳೆ ನೋಡಿ.

ಭಾಗಾಕಾರ ಕ್ರಿಯೆಯನ್ನು ನಡೆಸಲು, ಮೊದಲು ನಾವು ಭಾಜ್ಯ ಮತ್ತು ಭಾಜಕಗಳೆರಡನ್ನೂ ಅವುಗಳ ಡಿಗ್ರಿಯ ಇಳಿಕೆ ಕ್ರಮ ದಲ್ಲಿ ಬರೆಯುತ್ತೇವೆ.

ಆದ್ದರಿಂದ,

ಭಾಜ್ಯ = $-x^3 + 3x^2 - 3x + 5$ ಮತ್ತು

ಭಾಜಕ = $-x^2 + x - 1$.

$-x^2 + x - 1$	$-x^3 + 3x^2 - 3x + 5$	$x - 2$
	$-x3 + x^2 - x$	
	$2x^2 - 2x + 5$ $2x^2 - 2x + 2$	
	3	

$\therefore$ ಭಾಗಲಬ್ಧ $= x - 2$, ಶೇಷ $= 3$

ಭಾಜಕ x ಭಾಗಲಬ್ಧ + ಶೇಷ $= (-x^2 + x - 1)(x - 2) + 3$

$= -x^3 + x^2 - x + 2x^2 - 2x + 2 + 3$

$= -x^3 + 3x^2 - 3x + 5$

= ಭಾಜ್ಯಈ ರೀತಿ ಭಾಗಾಕಾರ ಕ್ರಮವಿಧಿಯನ್ನು ತಾಳೆ ನೋಡಲಾಗಿದೆ.

ಉದಾಹರಣೆ 9: $\sqrt{2}$ ಮತ್ತು $-\sqrt{2}$ ಇವು $2x^4 - 3x^3 - 3x^2 + 6x - 2$ ರ ಎರಡು ಶೂನ್ಯತೆಗಳಾದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡುಹಿಡಿಯಿರಿ.

ಪರಿಹಾರ: $\sqrt{2}$ ಮತ್ತು $-\sqrt{2}$ ಇವು ಎರಡು ಶೂನ್ಯತೆಗಳಾಗಿರುವುದರಿಂದ,

$(x - 2)(x + 2) = x^2 - 2$ ಇದು ದತ್ತ ಬಹುಪದೋಕ್ತಿಯ ಒಂದು ಅಪವರ್ತನವಾಗಿದೆ.

ಈಗ ದತ್ತ ಬಹುಪದೋಕ್ತಿಯನ್ನು ನಾವು $x^2 - 2$ ರಿಂದ ಭಾಗಿಸುತ್ತೇವೆ.

$x^2 - 2$	$2x^4 - 3x^3 - 3x^2 + 6x - 2$	$2x^2 - 3x + 1$
	$-2x^4 + 4x^2$	
	$-3x^3 + x^2 + 6x - 2$ $-3x^3 + 6x$	
	$+ x^2 - 2$ $+ x^2 - 2$	
	0	

ಭಾಗಲಬ್ಧ = $2x^2 - 3x + 1$

ಅಪವರ್ತಿಸಿದಾಗ,

$2x^2 - 2x - x + 1$

$= 2x(x - 1) - 1(2x - 1)$

$= (2x - 1)(x - 1)$

$\Rightarrow x = \frac{1}{2}, x = 1$ ಇವು ಶೂನ್ಯತೆಗಳಾಗಿವೆ.

$\therefore \sqrt{2}, -\sqrt{2}, \frac{1}{2},$ ಮತ್ತು 1 ಬಹುಪದೋಕ್ತಿಯ ಶೂನ್ಯತೆಗಳು.

ಅಭ್ಯಾಸ 9.3

1. ಕೆಳಗಿನ ಪ್ರತಿಯೊಂದರಲ್ಲಿಯೂ ಬಹುಪದೋಕ್ತಿ p(x) ನ್ನು ಬಹುಪದೋಕ್ತಿ g(x) ದಿಂದ ಭಾಗಿಸಿ, ಭಾಗಲಬ್ಧ ಮತ್ತು ಶೇಷವನ್ನು ಕಂಡುಹಿಡಿಯಿರಿ.

   (i) $p(x) = x^3 - 3x^2 + 5x - 3$ $g(x) = x^2 - 2$
   (ii) $p(x) = x^4 - 3x^2 + 4x + 5$ $g(x) = x^2 + 1 - x$
   (iii) $p(x) = x^4 - 5x + 6$ $g(x) = 2 - x^2$
2. ಎರಡನೇ ಬಹುಪದೋಕ್ತಿಯನ್ನು ಮೊದಲನೇ ಬಹುಪದೋಕ್ತಿಯಿಂದ ಭಾಗಿಸಿ ಹಾಗೂ ಮೊದಲನೇ ಬಹುಪದೋಕ್ತಿಯು ಎರಡನೇ ಬಹುಪದೋಕ್ತಿಯ ಅಪವರ್ತನವಾಗಿದೆಯೇ ಎಂಬುದನ್ನು ಪರೀಕ್ಷಿಸಿ.

   (i) $t^2 - 3$ $2t^4 + 3t^3 - 2t^2 - 9t - 12$
   (ii) $x^2 + 3x + 1$ $3x^4 + 5x^3 - 7x^2 + 2x + 2$
   (iii) $x^3 - 3x + 1$ $x^5 - 4x^3 + x^2 + 3x + 1$
3. $\sqrt{\frac{5}{3}}$ ಮತ್ತು $-\sqrt{\frac{5}{3}}$ ಇವು $3x^4 + 6x^3 - 2x^2 - 10x - 5$ ರ ಎರಡು ಶೂನ್ಯತೆಗಳಾಗಿದ್ದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡುಹಿಡಿಯಿರಿ.
4. $x^3 - 3x^2 + x + 2$ನ್ನು g(x) ಎಂಬ ಬಹುಪದೋಕ್ತಿಯಿಂದ ಭಾಗಿಸಿದಾಗ ಸಿಗುವ ಭಾಗಲಬ್ಧ ಮತ್ತು ಶೇಷಗಳು ಕ್ರಮವಾಗಿ $x - 2$ ಮತ್ತು $-2x + 4$ ಆದರೆ g(x) ನ್ನು ಕಂಡುಹಿಡಿಯಿರಿ.
5. ಭಾಗಾಕಾರ ಕ್ರಮವಿಧಿಯನ್ನು ಹಾಗೂ ಈ ಕೆಳಗಿನ ಸಂಬಂಧಗಳನ್ನು ಸರಿದೂಗಿಸುವ p(x), g(x), q(x) ಮತ್ತು r(x) ಎಂಬ ಬಹುಪದೋಕ್ತಿಗಳಿಗೆ ಉದಾಹರಣೆಗಳನ್ನು ಕೊಡಿ.

   (i) p(x) ನ ಡಿಗ್ರಿ = q(x) ನ ಡಿಗ್ರಿ
   (ii) g(x) ನ ಡಿಗ್ರಿ = r(x) ನ ಡಿಗ್ರಿ
   (iii) r(x) ನ ಡಿಗ್ರಿ = 0

ಪರಿಹಾರ

1. ಕೆಳಗಿನ ಪ್ರತಿಯೊಂದರಲ್ಲಿಯೂ ಬಹುಪದೋಕ್ತಿ p(x) ನ್ನು ಬಹುಪದೋಕ್ತಿ g(x) ದಿಂದ ಭಾಗಿಸಿ, ಭಾಗಲಬ್ಧ ಮತ್ತು ಶೇಷವನ್ನು ಕಂಡುಹಿಡಿಯಿರಿ.

(i) $p(x) = x^3 - 3x^2 + 5x - 3$ $g(x) = x^2 - 2$
(ii) $p(x) = x^4 - 3x^2 + 4x + 5$ $g(x) = x^2 + 1 - x$
(iii) $p(x) = x^4 - 5x + 6$ $g(x) = 2 - x^2$

(i) $p(x) = x^3 - 3x^2 + 5x - 3$ $g(x) = x^2 - 2$

$x^2 - 2$	$x^3 - 3x^2 + 5x - 3$	$x - 3$
	$x^3 - 0 - 2x$	
	$-3x^2 + 7x - 3$	
	$-3x^2 + 0 + 6$	
	$+7x - 9$	

ಭಾಗಲಬ್ಧ = $x - 3$ ಮತ್ತು ಶೇಷ = $7x - 9$

(ii) $p(x) = x^4 - 3x^2 + 4x + 5$ $g(x) = x^2 + 1 - x$

$x^2 - x + 1$	$x^4 + 0.x^3 - 3x^2 + 4x + 5$	$x^2 + x - 3$
	$x^4 - x^3 + x^2$	
	$x^3 - 4x^2 + 4x$	
	$x^3 - x^2 + x$	
	$- 3x^2 + 3x + 5$	
	$- 3x^2 + 3x - 3$	
	8	

ಭಾಗಲಬ್ಧ = $x^2 + x - 3$ ಮತ್ತು ಶೇಷ = 8

(iii) $p(x) = x^4 - 5x + 6$ $g(x) = 2 - x^2$

$- x^2 + 2$	$x^4 + 0x^3 + 0x^2 - 5x + 6$	$-x^2 - 2$
	$x^4 + 0 - 2x^2$	
	$2x^2 - 5x + 6$	
	$2x^2 + 0 - 4$	
	$- 5x + 10$	

2. ಎರಡನೇ ಬಹುಪದೋಕ್ತಿಯನ್ನು ಮೊದಲನೇ ಬಹುಪದೋಕ್ತಿಯಿಂದ ಭಾಗಿಸಿ ಹಾಗೂ ಮೊದಲನೇ ಬಹುಪದೋಕ್ತಿಯು ಎರಡನೇ ಬಹುಪದೋಕ್ತಿಯ ಅಪವರ್ತನವಾಗಿದೆಯೇ ಎಂಬುದನ್ನು ಪರೀಕ್ಷಿಸಿ.

(i) $t^2 - 3$ $2t^4 + 3t^3 - 2t^2 - 9t - 12$
(ii) $x^2 + 3x + 1$ $3x^4 + 5x^3 - 7x^2 + 2x + 2$
(iii) $x^3 - 3x + 1$ $x^5 - 4x^3 + x^2 + 3x + 1$

(i) $t^2 - 3$ $2t^4 + 3t^3 - 2t^2 - 9t - 12$

$t^2 - 3$	$2t^4 + 3t^3 - 2t^2 - 9t - 12$	$2t^2 + 3t + 4$
	$2t^4 + 0 - 6t^2$	
	$+ 3t^3 + 4t^2 - 9t$	
	$+ 3t^3 + 0 - 9t$	
	$+4t^2 + 0 - 12$	
	$+4t^2 + 0 - 12$	
	0	

ಶೇಷವು 0 ಆಗಿರುವುದರಿಂದ ಮೊದಲನೇ ಬಹುಪದೋಕ್ತಿಯು ಎರಡನೇ ಬಹುಪದೋಕ್ತಿಯ ಅಪವರ್ತನವಾಗಿದೆ

(ii) $x^2 + 3x + 1$ $3x^4 + 5x^3 - 7x^2 + 2x + 2$

$x^2 + 3x + 1$	$3x^4 + 5x^3 - 7x^2 + 2x + 2$	$3x^2 - 4x + 2$
	$3x^4 + 9x^3 + 3x^2$	
	$- 4x^3 - 10x^2 + 2x$	
	$- 4x^3 - 12x^2 - 4x$	
	$+2x^2 + 6x + 2$	
	$+2x^2 + 6x + 2$	
	0	

ಶೇಷವು 0 ಆಗಿರುವುದರಿಂದ ಮೊದಲನೇ ಬಹುಪದೋಕ್ತಿಯು ಎರಡನೇ ಬಹುಪದೋಕ್ತಿಯ ಅಪವರ್ತನವಾಗಿದೆ

(iii) $x^3 - 3x + 1$ $\quad x^5 - 4x^3 + x^2 + 3x + 1$

$x^3 - 3x + 1$	$x^5 - 4x^3 + x^2 + 3x + 1$	$x^2 - 1$
	$x^5 - 3x^3 + x^2$	
	$- x^3 + 0 + 3x + 1$	
	$- x^3 + 0 + 3x - 1$	
	2	

ಶೇಷವು 2 ಆಗಿರುವುದರಿಂದ ಮೊದಲನೇ ಬಹುಪದೋಕ್ತಿಯು ಎರಡನೇ ಬಹುಪದೋಕ್ತಿಯ ಅಪವರ್ತನವಾಗಿರುವುದಿಲ್ಲ.

3. $\sqrt{\frac{5}{3}}$ ಮತ್ತು $-\sqrt{\frac{5}{3}}$ ಇವು $3x^4 + 6x^3 - 2x^2 - 10x - 5$ ರ ಎರಡು ಶೂನ್ಯತೆಗಳಾಗಿದ್ದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡುಹಿಡಿಯಿರಿ.

$\sqrt{\frac{5}{3}}$ ಮತ್ತು $-\sqrt{\frac{5}{3}}$ ಇವು $3x^4 + 6x^3 - 2x^2 - 10x - 5$ ರ ಎರಡು ಶೂನ್ಯತೆಗಳಾಗಿವೆ.

$\therefore \left(x - \sqrt{\frac{5}{3}}\right)$ ಮತ್ತು $\left(x + \sqrt{\frac{5}{3}}\right)$ ಗಳು ಬಹುಪದೋಕ್ತಿಯ ಅಪವರ್ತನಗಳಾಗಿವೆ.

$\Rightarrow \left(x - \sqrt{\frac{5}{3}}\right)\left(x + \sqrt{\frac{5}{3}}\right) = x^2 - \frac{5}{3}$ ನಿಂದ ಬಹುಪದೋಕ್ತಿಯನ್ನು ಭಾಗಿಸಿದಾಗ

$x^2 - \frac{5}{3}$	$3x^4 + 6x^3 - 2x^2 - 10x - 5$	$3x^2 + 6x + 3$
	$3x^4 + 0 - 5x^2$	
	$+ 6x^3 + 3x^2 - 10x$	
	$+ 6x^3 + 0 - 10x$	
	$+3x^2 + 0 - 5$	
	$+3x^2 + 0 - 5$	
	0	

$3x^2 + 6x + 3 = 3(x^2 + 2x + 1)$

$(x^2 + 2x + 1)$ ನ್ನು ಅಪವರ್ತಿಸಿದಾಗ,

$= x^2 + x + x + 1$

$= x(x + 1) + 1(x + 1)$

$= (x + 1)(x + 1)$

$\Rightarrow 3x^4 + 6x^3 - 2x^2 - 10x - 5$ ಯ ಅಪವರ್ತನಗಳು $3\left(x - \sqrt{\frac{5}{3}}\right)\left(x + \sqrt{\frac{5}{3}}\right)(x + 1)(x + 1)$

ಆದ್ದರಿಂದ ಬಹುಪದೋಕ್ತಿಯ ಶೂನ್ಯತೆಗಳು $\sqrt{\frac{5}{3}}, -\sqrt{\frac{5}{3}}, -1$ ಮತ್ತು -1

4. $x^3 - 3x^2 + x + 2$ನ್ನು $g(x)$ ಎಂಬ ಬಹುಪದೋಕ್ತಿಯಿಂದ ಭಾಗಿಸಿದಾಗ ಸಿಗುವ ಭಾಗಲಬ್ಧ ಮತ್ತು ಶೇಷಗಳು ಕ್ರಮವಾಗಿ $x - 2$ ಮತ್ತು $-2x + 4$ ಆದರೆ $g(x)$ ನ್ನು ಕಂಡುಹಿಡಿಯಿರಿ.

ಭಾಜ್ಯ $P(x) = x^3 - 3x^2 + x + 2$

ಭಾಜಕ $g(x) = ?$

ಭಾಗಲಬ್ಧ $q(x) = x - 2$

ಶೇಷ $r(x) = -2x + 4$

$P(x) = g(x).q(x) + r(x)$

$x^3 - 3x^2 + x + 2 = g(x).(x - 2) + (-2x + 4)$
$\Rightarrow g(x).(x - 2) = x^3 - 3x^2 + x + 2 - (-2x + 4)$
$\Rightarrow g(x).(x - 2) = x^3 - 3x^2 + x + 2 + 2x - 4$
$\Rightarrow g(x).(x - 2) = x^3 - 3x^2 + 3x - 2$
$\Rightarrow g(x) = \frac{x^3 - 3x^2 + 3x - 2}{x - 2}$

$x - 2$	$x^3 - 3x^2 + 3x - 2$	$x^2 - x + 1$
	$x^3 - 2x^2$	
	$-x^2 + 3x$	
	$-x^2 + 2x$	
	$+x - 2$	
	$+x - 2$	
	0	

$\therefore g(x) = x^2 - x + 1$

5. **ಭಾಗಾಕಾರ ಕ್ರಮವಿಧಿಯನ್ನು ಹಾಗೂ ಈ ಕೆಳಗಿನ ಸಂಬಂಧಗಳನ್ನು ಸರಿದೂಗಿಸುವ p(x), g(x), q(x) ಮತ್ತು r(x) ಎಂಬ ಬಹುಪದೋಕ್ತಿಗಳಿಗೆ ಉದಾಹರಣೆಗಳನ್ನು ಕೊಡಿ.**

(i) p(x) ನ ಡಿಗ್ರಿ = q(x) ನ ಡಿಗ್ರಿ

(ii) g(x) ನ ಡಿಗ್ರಿ = r(x) ನ ಡಿಗ್ರಿ

(iii) r(x) ನ ಡಿಗ್ರಿ = 0

(i) $p(x) = 6x^2 + 2x + 2$

$g(x) = 2$
$q(x) = 3x^2 + x + 1$
$r(x) = 0$
$\Rightarrow$ p(x) ನ ಡಿಗ್ರಿ = q(x) ನ ಡಿಗ್ರಿ = 2
ಭಾಗಾಕಾರ ಕ್ರಮವಿಧಿಯನ್ನು ಪರೀಕ್ಷಿಸಿದಾಗ,
$g(x) \times q(x) + r(x) = 2(3x^2 + x + 1) + 0$
$g(x) \times q(x) + r(x) = 6x^2 + 2x + 2 = P(x)$
$\Rightarrow p(x) = g(x) \times q(x) + r(x)$
$\therefore$ ಭಾಗಾಕಾರ ಕ್ರಮವಿಧಿಯನ್ನು ಸರಿಹೊಂದುತ್ತದೆ.

(ii) $p(x) = x^3 + x$

$g(x) = x^2$
$q(x) = x$ ಮತ್ತು $r(x) = x$
g(x) ನ ಡಿಗ್ರಿ = r(x) ನ ಡಿಗ್ರಿ = 1
ಭಾಗಾಕಾರ ಕ್ರಮವಿಧಿಯನ್ನು ಪರೀಕ್ಷಿಸಿದಾಗ,
$g(x) \times q(x) + r(x) = (x^2) \times x + x$
$g(x) \times q(x) + r(x) = x^3 + x = p(x)$
$\Rightarrow p(x) = g(x) \times q(x) + r(x)$
$\therefore$ ಭಾಗಾಕಾರ ಕ್ರಮವಿಧಿಯನ್ನು ಸರಿಹೊಂದುತ್ತದೆ.

(iii) $p(x) = x^3 + 1$

$g(x) = x^2$
$q(x) = x$ ಮತ್ತು $r(x) = 1$
r(x) ನ ಡಿಗ್ರಿ = 0
ಭಾಗಾಕಾರ ಕ್ರಮವಿಧಿಯನ್ನು ಪರೀಕ್ಷಿಸಿದಾಗ,

$g(x) \times q(x) + r(x) = (x^2) \times x + 1$
$\Rightarrow g(x) \times q(x) + r(x) = x^3 + 1 = P(x)$
$\Rightarrow p(x) = g(x) \times q(x) + r(x)$
$\therefore$ ಭಾಗಾಕಾರ ಕ್ರಮವಿಧಿಯನ್ನು ಸರಿಹೊಂದುತ್ತದೆ.

ಸಾರಾಂಶ:

1. ಡಿಗ್ರಿ 1, 2 ಮತ್ತು 3 ಆಗಿರುವ ಬಹುಪದೋಕ್ತಿಗಳಿಗೆ ಕ್ರಮವಾಗಿ ರೇಖಾತ್ಮಕ, ವರ್ಗ ಮತ್ತು ಘನ ಬಹುಪದೋಕ್ತಿಗಳು ಎನ್ನುತ್ತಾರೆ.
2. ವಾಸ್ತವ ಸಂಖ್ಯೆಗಳನ್ನು ಸಹಗುಣಕಗಳನ್ನಾಗಿ ಹೊಂದಿರುವ, x ಎಂಬ ಚರಾಕ್ಷರವುಳ್ಳ ಒಂದು ವರ್ಗ ಬಹುಪದೋಕ್ತಿಯು $ax^2 + bx + c$ ರೂಪದಲ್ಲಿರುತ್ತದೆ. ಇಲ್ಲಿ a, b,c ಗಳು ವಾಸ್ತವ ಸಂಖ್ಯೆಗಳಾಗಿದ್ದು, $a \neq 0$ ಆಗಿರುತ್ತದೆ.
3. ಒಂದು ಬಹುಪದೋಕ್ತಿ $p(x)$ ದ ಶೂನ್ಯತೆಗಳು ನಿಖರವಾಗಿ $y = p(x)$ ದ ನಕ್ಷೆಯು x - ಅಕ್ಷವನ್ನು ಛೇದಿಸುವ ಬಿಂದುಗಳ x - ನಿರ್ದೇಶಾಂಕಗಳಾಗಿರುತ್ತವೆ.
4. ಒಂದು ವರ್ಗ ಬಹುಪದೋಕ್ತಿಯು ಗರಿಷ್ಠ 2 ಶೂನ್ಯತೆಗಳನ್ನು ಮತ್ತುಒಂದು ಘನ ಬಹುಪದೋಕ್ತಿಯು ಗರಿಷ್ಠ 3 ಶೂನ್ಯತೆಗಳನ್ನು ಹೊಂದಿರಬಹುದು.
5. α ಮತ್ತು β ಗಳು $ax^2 + bx + c$ ಎಂಬ ಒಂದು ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಆಗ
$\alpha + \beta = \frac{-b}{a}$ ಮತ್ತು $\alpha\beta = \frac{c}{a}$ ಆಗಿರುತ್ತದೆ.
6. α, β ಮತ್ತು γ ಗಳು $ax^3 + bx^2 + cx + d$ ಎಂಬ ಒಂದು ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ, ಆಗ

$$\alpha + \beta + \gamma = \frac{-b}{a}$$
$$\alpha\beta + \beta\gamma + \gamma\alpha = \frac{c}{a}$$
$\alpha\beta\gamma = \frac{-d}{a}$ ಆಗಿರುತ್ತದೆ.

7. ಭಾಗಾಕಾರ ಕ್ರಮವಿಧಿಯ ಹೇಳಿಕೆಯು ಈ ಕೆಳಗಿನಂತಿದೆ. ಯಾವುದೇ ದತ್ತ ಬಹುಪದೋಕ್ತಿ $p(x)$ ಹಾಗೂ ಯಾವುದೇ ಶೂನ್ಯವಲ್ಲದ ಬಹುಪದೋಕ್ತಿ $g(x)$ ಗಳಿಗೆ
$p(x) = g(x).\ q(x) + r(x)$ ಆಗುವಂತೆ $q(x)$ ಮತ್ತು $r(x)$ ಎಂಬ ಎರಡು ಬಹುಪದೋಕ್ತಿಗಳಿರುತ್ತವೆ. ಇಲ್ಲಿ $r(x) = 0$ ಅಥವಾ $r(x)$ ದ ಡಿಗ್ರಿ $<$ $g(x)$ ದ ಡಿಗ್ರಿ ಆಗಿರುತ್ತದೆ.

10 ವರ್ಗ ಸಮೀಕರಣಗಳು

ಬಹುಪದೋಕ್ತಿಯನ್ನು ಸೊನ್ನೆಗೆ ಸಮೀಕರಿಸಿದರೆ ನಮಗೆ ವರ್ಗ ಸಮೀಕರಣ ದೊರೆಯುತ್ತದೆ. $p(x)$ ಎಂಬುದು ಒಂದು ವರ್ಗಬಹುಪದೋಕ್ತಿ ಆದರೆ $p(x) = 0$ ಎಂಬುದು ಒಂದು ವರ್ಗಸಮೀಕರಣ ಆಗುತ್ತದೆ.

$p(x) = 0$ ರೂಪದ, $p(x)$ ಎಂಬುದು ಮಹತ್ತಮ ಘಾತ 2 ಹೊಂದಿರುವ ಬಹುಪದೋಕ್ತಿ ಆಗಿರುವ ಯಾವುದೇ ಸಮೀಕರಣವನ್ನು ವರ್ಗಸಮೀಕರಣ ಎನ್ನುತ್ತೇವೆ.

ವರ್ಗಸಮೀಕರಣದ ಆದರ್ಶರೂಪ:

$\boxed{ax^2 + bx + c = 0\,,}$ $a \neq 0$ ಆಗಿರುತ್ತದೆ.

ಒಂದು ವರ್ಗಸಮೀಕರಣದ ಲಕ್ಷಣಗಳೆಂದರೆ,

- ವರ್ಗಸಮೀಕರಣ ಒಂದು ಚರಾಕ್ಷರವನ್ನು ಹೊಂದಿರುತ್ತದೆ.
- ಚರಾಕ್ಷರದ ಗರಿಷ್ಠ ಘಾತ 2 ನ್ನು ಹೊಂದಿರುವ ಒಂದು ಸಮೀಕರಣವಾಗಿದೆ.
- ವರ್ಗಸಮೀಕರಣದ ಆದರ್ಶ ರೂಪ $ax^2 + bx + c = 0$ ಆಗಿರುತ್ತದೆ.
  ಇಲ್ಲಿ a ಯು x^2 ನ ಸಹಗುಣಕ, b ಯು x ನ ಸಹಗುಣಕ, c ಯು ಒಂದು ಸ್ಥಿರಾಂಕವಾಗಿದೆ.
  ಇಲ್ಲಿ a, b, c ಗಳು ವಾಸ್ತವ ಸಂಖ್ಯೆಗಳು ಮತ್ತು $a \neq 0$ ಆಗಿರುತ್ತದೆ.
- ವರ್ಗ ಸಮೀಕರಣದ ಆದರ್ಶ ರೂಪದಲ್ಲಿ ಚರಾಕ್ಷರದ ಘಾತಗಳು ಇಳಿಕೆ ಕ್ರಮದಲ್ಲಿರುವಂತೆ ಪದಗಳನ್ನು ಬರೆಯಲಾಗುತ್ತದೆ.

ಮಿಶ್ರ ವರ್ಗಸಮೀಕರಣ : ವರ್ಗಸಮೀಕರಣ $ax^2 + bx + c = 0$ ದಲ್ಲಿ $a \neq 0,\ b \neq 0$ ಆಗಿದ್ದರೆ, ಅವುಗಳನ್ನು ಮಿಶ್ರ ವರ್ಗಸಮೀಕರಣಗಳು ಎನ್ನುತ್ತೇವೆ.

ಉದಾ : $x^2 - 3x - 5 = 0$, $x^2 + 5x + 6 = 0$, $x + \frac{1}{x} = 5$, $(2x - 5)^2 = 81$

ಶುದ್ಧ ವರ್ಗಸಮೀಕರಣ : ವರ್ಗಸಮೀಕರಣಗಳ ಚರಾಕ್ಷರವು 2 ನೇ ಘಾತದಲ್ಲಿ ಮಾತ್ರ ಕಂಡುಬಂದರೆ ಅವುಗಳನ್ನು ಶುದ್ಧ ವರ್ಗ ಸಮೀಕರಣಗಳು ಎನ್ನುವರು.

ಶುದ್ಧ ವರ್ಗಸಮೀಕರಣದ ಆದರ್ಶ ರೂಪ: $ax^2 + c = 0\ [a \neq 0]$

ಉದಾಹರಣೆ 1 : ಈ ಕೆಳಗಿನ ಸನ್ನಿವೇಶಗಳನ್ನು ಗಣಿತೀಯವಾಗಿ ಪ್ರತಿನಿಧಿಸಿ.

(i) ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಎಂಬುದನ್ನು ನಾವು ಕಂಡುಹಿಡಿಯಲು ಬಯಸುತ್ತೇವೆ.

(ii) ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಆಟಿಕೆಗಳನ್ನು ತಯಾರಿಸುತ್ತದೆ. ಪ್ರತಿ ಆಟಿಕೆಯ ಉತ್ಪಾದನಾ ವೆಚ್ಚವು, (ರೂಪಾಯಿಗಳಲ್ಲಿ) 55ರಿಂದ, ಒಂದು ದಿನದಲ್ಲಿ ಉತ್ಪಾದಿಸಿದ ಆಟಿಕೆಗಳ ಸಂಖ್ಯೆಯನ್ನು ಕಳೆದಷ್ಟಕ್ಕೆ ಸಮನಾಗಿರುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಆಟಿಕೆಗಳ ಒಟ್ಟು ಒತ್ಪಾದನಾ ವೆಚ್ಚವು ರೂ750 ಆಗಿದ್ದರೆ, ಆ ದಿನ ಉತ್ಪಾದಿಸಿದ ಆಟಿಕೆಗಳ ಸಂಖ್ಯೆಯನ್ನು ಕಂಡುಹಿಡಿಯಲು ನಾವು ಬಯಸುತ್ತೇವೆ.

ಪರಿಹಾರ :

(i) ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು x ಆಗಿರಲಿ.

ಆಗ ಜೀವಂತಿಯ ಬಳಿ ಇದ್ದ ಗೋಲಿಗಳ ಸಂಖ್ಯೆ = 45 – x [∵ಅವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳು 45]

5 ಗೋಲಿಗಳನ್ನು ಕಳೆದುಕೊಂಡಾಗ, ಜಾನ್‌ನ ಬಳಿ ಉಳಿದ ಗೋಲಿಗಳ ಸಂಖ್ಯೆ = x – 5

5 ಗೋಲಿಗಳನ್ನು ಕಳೆದುಕೊಂಡಾಗ, ಜೀವಂತಿಯ ಬಳಿ ಉಳಿದ ಗೋಲಿಗಳ ಸಂಖ್ಯೆ = 45 – x – 5 = 40 – x

∴ ಅವುಗಳ ಗುಣಲಬ್ಧ = 124

$(x - 5)(40 - x) = 124$

$\Rightarrow 40x - x^2 - 200 + 5x = 124$

$\Rightarrow -x^2 + 45x - 200 = 124$

$\Rightarrow -x^2 + 45x - 324 = 0$

$\Rightarrow x^2 - 45x + 324 = 0$

ಆದ್ದರಿಂದ, ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣ $x^2 - 45x + 324 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿದೆ.

(ii) ಆ ದಿನ ತಯಾರಿಸಿದ ಆಟಿಕೆಗಳ ಸಂಖ್ಯೆ x ಆಗಿರಲಿ

ಆದ್ದರಿಂದ, ಆ ದಿನದ ಪ್ರತಿ ಆಟಿಕೆಯ ಉತ್ಪಾದನಾ ವೆಚ್ಚ (ರೂಪಾಯಿಗಳಲ್ಲಿ) = 55 – x ಆದ್ದರಿಂದ,

ಆ ದಿನದ ಒಟ್ಟು ಆಟಿಕೆಗಳ ಉತ್ಪಾದನಾ ವೆಚ್ಚ (ರೂಪಾಯಿಗಳಲ್ಲಿ) = x (55 – x)

∴ $x(55 - x) = 750$

$\Rightarrow 55x - x^2 = 750$

$\Rightarrow -x^2 + 55x - 750 = 0$

$\Rightarrow x^2 - 55x + 750 = 0$

ಆದ್ದರಿಂದ, ಆ ದಿನ ತಯಾರಿಸಿದ ಆಟಿಕೆಗಳ ಸಂಖ್ಯೆಯು ವರ್ಗ ಸಮೀಕರಣ $x^2 - 55x - 750 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿರುತ್ತದೆ.

ಉದಾಹರಣೆ 2 : ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x - 2)^2 + 1 = 2x - 3$ (ii) $x(x + 1) + 8 = (x + 2)(x - 2)$

(iii) $x(2x + 3) = x^2 + 1$ (iv) $(x + 2)^3 = x^3 - 4$

(i) $(x - 2)^2 + 1 = 2x - 3$

$x^2 - 4x + 4 + 1 = 2x - 3$

$x^2 - 4x - 2x + 5 + 3 = 0$

$x^2 - 6x + 8 = 0$

ಇದು $ax^2 + bx + c = 0$ ರೂಪದಲ್ಲಿದೆ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(ii) $x(x + 1) + 8 = (x + 2)(x - 2)$

$x^2 + x + 8 = x^2 - 4$

$x^2 - x^2 + x + 8 + 4 = 0$

$x + 12 = 0$

ಇದು $ax^2 + bx + c = 0$ ರೂಪದಲ್ಲಿಲ್ಲ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಲ್ಲ.

(iii) $x(2x + 3) = x^2 + 1$

$2x^2 + 3x = x^2 + 1$

$2x^2 - x^2 + 3x - 1 = 0$

$x^2 + 3x - 1 = 0$

ಇದು $ax^2 + bx + c = 0$ ರೂಪದಲ್ಲಿದೆ.
ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(iv) $(x+2)^3 = x^3 - 4$

$x^3 + 2^3 + 3(x)(2)^2 + 3x^2(2) = x^3 - 4$
$x^3 + 8 + 12x + 6x^2 = x^3 - 4$
$x^3 - x^3 + 6x^2 + 12x + 8 + 4 = 0$
$6x^2 + 12x + 12 = 0 \div 6$
$x^2 + 2x + 2 = 0$
ಇದು $ax^2 + bx + c = 0$ ರೂಪದಲ್ಲಿದೆ.
ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣ.

ಅಭ್ಯಾಸ 10.1

1. ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x+1)^2 = 2(x-3)$ (ii) $x^2 - 2x = (-2)(3-x)$
(iii) $(x-2)(x+1) = (x-1)(x+3)$ (iv) $(x-3)(2x+1) = x(x+5)$
(v) $(2x-1)(x-3) = (x+5)(x-1)$ (vi) $x^2 + 3x + 1 = (x-2)^2$
(vii) $(x+2)^3 = 2x(x^2-1)$ (viii) $x^3 - 4x^2 - x + 1 = (x-2)^3$

2. ಈ ಕೆಳಗಿನ ಸನ್ನಿವೇಶಗಳನ್ನು ವರ್ಗ ಸಮೀಕರಣಗಳ ರೂಪದಲ್ಲಿ ವ್ಯಕ್ತಪಡಿಸಿ.

(i) ಒಂದು ಆಯತಾಕಾರದ ನಿವೇಶನದ ವಿಸ್ತೀರ್ಣವು $528m^2$ ಆಗಿದೆ. ನಿವೇಶನದ ಉದ್ದವು (ಮೀಟರ್‌ಗಳಲ್ಲಿ) ಅದರ ಅಗಲದ ಎರಡಷ್ಟಕ್ಕಿಂತ ಒಂದು ಹೆಚ್ಚಾಗಿದೆ. ಆ ನಿವೇಶನದ ಉದ್ದ ಮತ್ತು ಅಗಲಗಳನ್ನು ನಾವು ಕಂಡುಹಿಡಿಯಬೇಕಾಗಿದೆ.

(ii) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ.

(iii) ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಯಸುತ್ತೇವೆ.

(iv) ಒಂದು ರೈಲು ಏಕರೂಪದ ಜವದಲ್ಲಿ ಚಲಿಸಿ, 480km ದೂರವನ್ನು ಕ್ರಮಿಸುತ್ತದೆ. ಅದರ ಜವವು 8km/h ಕಡಿಮೆ ಆಗಿದ್ದರೆ, ಅಷ್ಟೇ ದೂರವನ್ನು ಕ್ರಮಿಸಲು ರೈಲು 3 ಘಂಟೆ ಹೆಚ್ಚಾಗಿ ತೆಗೆದುಕೊಳ್ಳುತ್ತಿತ್ತು. ನಾವು ರೈಲಿನ ಜವವನ್ನು ಕಂಡುಹಿಡಿಯಲು ಬಯಸುತ್ತೇವೆ.

ಪರಿಹಾರ

1. ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x+1)^2 = 2(x-3)$ (ii) $x^2 - 2x = (-2)(3-x)$
(iii) $(x-2)(x+1) = (x-1)(x+3)$ (iv) $(x-3)(2x+1) = x(x+5)$
(v) $(2x-1)(x-3) = (x+5)(x-1)$ (vi) $x^2 + 3x + 1 = (x-2)^2$
(vii) $(x+2)^3 = 2x(x^2-1)$ (viii) $x^3 - 4x^2 - x + 1 = (x-2)^3$

(i) $(x+1)^2 = 2(x-3)$

$x^2 + 2x + 1 = 2x - 6$
$x^2 + 2x - 2x + 1 + 6 = 0$
$x^2 + 7 = 0$
ಇದು $ax^2 + bx + c = 0$ ರೂಪದಲ್ಲಿದೆ.
ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(ii) $x^2 - 2x = (-2)(3 - x)$

$x^2 - 2x = -6 + 2x$

$x^2 - 2x - 2x + 6 = 0$

$x^2 - 4x + 6 = 0$

ಇದು $ax^2 + bx + c = 0$ ರೂಪದಲ್ಲಿದೆ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(iii) $(x - 2)(x + 1) = (x - 1)(x + 3)$

$x^2 + x - 2x - 2 = x^2 + 3x - x - 3$

$x^2 - x - 2 = x^2 + 2x - 3$

$x^2 - x^2 - x - 2x - 2 + 3 = 0$

$-3x + 3 = 0 \times -1$

$3x - 1 = 0$

ಇದು $ax^2 + bx + c = 0$ ರೂಪದಲ್ಲಿಲ್ಲ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಲ್ಲ.

(iv) $(x - 3)(2x + 1) = x(x + 5)$

$2x^2 + x - 6x - 3 = x^2 + 5x$

$2x^2 - 5x - 3 = x^2 + 5x$

$2x^2 - x^2 - 5x - 5x - 3 = 0$

$x^2 - 10x - 3 = 0$

ಇದು $ax^2 + bx + c = 0$ ರೂಪದಲ್ಲಿದೆ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(v) $(2x - 1)(x - 3) = (x + 5)(x - 1)$

$2x^2 - 6x - x + 3 = x^2 - x + 5x - 5$

$2x^2 - 7x + 3 = x^2 + 4x - 5$

$2x^2 - x^2 - 7x - 4x + 3 + 5 = 0$

$x^2 - 11x + 8 = 0$

ಇದು $ax^2 + bx + c = 0$ ರೂಪದಲ್ಲಿದೆ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

(vi) $x^2 + 3x + 1 = (x - 2)^2$

$x^2 + 3x + 1 = x^2 - 2(x)(2) + 2^2$

$x^2 - x^2 + 3x + 4x + 1 - 4 = 0$

$7x - 3 = 0$

ಇದು $ax^2 + bx + c = 0$ ರೂಪದಲ್ಲಿಲ್ಲ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಲ್ಲ.

(vii) $(x + 2)^3 = 2x(x^2 - 1)$

$x^3 + 2^3 + 3(x)(2)^2 + 3x^2(2) = 2x^3 - 2x$

$x^3 + 8 + 12x + 6x^2 = 2x^3 - 2x$

$x^3 - 2x^3 + 6x^2 + 12x + 2x + 8 = 0$

$-x^3 + 6x^2 + 14x + 8 = 0 \times -1$

$x^3 - 6x^2 - 14x - 8 = 0$

ಇದು $ax^2 + bx + c = 0$ ರೂಪದಲ್ಲಿಲ್ಲ.

ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಲ್ಲ.

(viii) $x^3 - 4x^2 - x + 1 = (x - 2)^3$

$x^3 - 4x^2 - x + 1 = x^3 - 2^3 + 3(x)(2)^2 - 3x^2(2)$
$x^3 - 4x^2 - x + 1 = x^3 - 8 + 12x - 6x^2$ ೞ
$x^3 - x^3 - 4x^2 + 6x^2 - x - 12x + 1 + 8 = 0$
$2x^2 - 13x + 9 = 0$
ಇದು $ax^2 + bx + c = 0$ ರೂಪದಲ್ಲಿದೆ.
ಆದ್ದರಿಂದ ಕೊಟ್ಟಿರುವ ಸಮೀಕರಣವು ವರ್ಗಸಮೀಕರಣವಾಗಿದೆ.

2. **ಈ ಕೆಳಗಿನ ಸನ್ನಿವೇಶಗಳನ್ನು ವರ್ಗ ಸಮೀಕರಣಗಳ ರೂಪದಲ್ಲಿ ವ್ಯಕ್ತಪಡಿಸಿ.**

(i) ಒಂದು ಆಯತಾಕಾರದ ನಿವೇಶನದ ವಿಸ್ತೀರ್ಣವು $528m^2$ ಆಗಿದೆ. ನಿವೇಶನದ ಉದ್ದವು (ಮೀಟರ್‌ಗಳಲ್ಲಿ) ಅದರ ಅಗಲದ ಎರಡಷ್ಟಕ್ಕಿಂತ ಒಂದು ಹೆಚ್ಚಾಗಿದೆ. ಆ ನಿವೇಶನದ ಉದ್ದ ಮತ್ತು ಅಗಲಗಳನ್ನು ನಾವು ಕಂಡುಹಿಡಿಯಬೇಕಾಗಿದೆ.

ಅಗಲ $b = x$ m ಆಗಿರಲಿ
$\Rightarrow$ ಉದ್ದ $l = (2x + 1)$m
ಆಯತದ ವಿಸ್ತೀರ್ಣ $= l \times b$
$\Rightarrow 528 = x(2x + 1)$
$\Rightarrow 528 = 2x^2 + x$
$\Rightarrow 2x^2 + x - 528 = 0$

(ii) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ.

ಎರಡು ಕ್ರಮಾನುಗತ ಸಂಖ್ಯೆಗಳು x ಮತ್ತು $(x + 1)$ ಆಗಿರಲಿ.
ಅವುಗಳ ಗುಣಲಬ್ದ $= 306$
$\Rightarrow x(x + 1) = 306$
$\Rightarrow x^2 + x - 306 = 0$

(iii) ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಯಸುತ್ತೇವೆ.

ರೋಹನ್‌ನ ಈಗಿನ ವಯಸ್ಸು $= x$ ಆಗಿರಲಿ
ತಾಯಿಯ ಈಗಿನ ವಯಸ್ಸು $= x + 26$
3 ವರ್ಷಗಳ ನಂತರ
ರೋಹನ್‌ನ ವಯಸ್ಸು $= x + 3$
ತಾಯಿಯ ವಯಸ್ಸು $= x + 26 + 3 = x + 29$
3 ವರ್ಷಗಳ ನಂತರ ಅವರ ವಯಸ್ಸುಗಳ ಗುಣಲಬ್ದ $= 360$
$\therefore (x + 3)(x + 29) = 360$
$x^2 + 29x + 3x + 87 = 360$
$x^2 + 32x - 273 = 0$

(iv) ಒಂದು ರೈಲು ಏಕರೂಪದ ಜವದಲ್ಲಿ ಚಲಿಸಿ, 480km ದೂರವನ್ನು ಕ್ರಮಿಸುತ್ತದೆ. ಅದರ ಜವವು 8km/h ಕಡಿಮೆ ಆಗಿದ್ದರೆ, ಅಷ್ಟೇ ದೂರವನ್ನು ಕ್ರಮಿಸಲು ರೈಲು 3 ಘಂಟೆ ಹೆಚ್ಚಾಗಿ ತೆಗೆದುಕೊಳ್ಳುತ್ತಿತ್ತು. ನಾವು ರೈಲಿನ ಜವವನ್ನು ಕಂಡುಹಿಡಿಯಲು ಬಯಸುತ್ತೇವೆ.

ರೈಲಿನ ಜವ $= x\ km/h$ ಆಗಿರಲಿ.
$480\ km$ ಚಲಿಸಲು ತೆಗೆದುಕೊಳ್ಳುವ ಕಾಲ $= \frac{480}{x}\ hrs$
8 ಘಂಟೆ ಕಡಿಮೆ ಚಲಿಸಿದಾಗ ರೈಲಿನ ಜವ $= (x - 8)km/h$
$480\ km$ ಚಲಿಸಲು 3 ಘಂಟೆ ಜಾಸ್ತಿಯಾದ್ದರಿಂದ ತೆಗೆದುಕೊಳ್ಳುವ ಕಾಲ $= \left(\frac{480}{x} + 3\right) hrs$
ರೈಲಿನ ಜವ $= x\ km/h$ ಆಗಿರಲಿ.

$480\,km$ ಚಲಿಸಲು ತೆಗೆದುಕೊಳ್ಳುವ ಕಾಲ $= \frac{480}{x}\,hrs$

8 ಘಂಟೆ ಕಡಿಮೆ ಚಲಿಸಿದಾಗ ರೈಲಿನ ಜವ $= (x-8)km/h$

$480\,km$ ಚಲಿಸಲು 3 ಘಂಟೆ ಜಾಸ್ತಿಯಾದ್ದರಿಂದ ತೆಗೆದುಕೊಳ್ಳುವ ಕಾಲ $= \frac{480}{x-8}\,hrs$

$\Rightarrow \frac{480}{x} + 3 = \frac{480}{x-8}$

$\Rightarrow 480(x-8) + 3x(x-8) = 480x$

$\Rightarrow 480x - 3840 + 3x^2 - 24x = 480x$

$\Rightarrow 3840 + 3x^2 - 24x = 0$

$\Rightarrow 3x^2 - 24x + 3840 = 0$

$\Rightarrow x^2 - 8x + 1280 = 0$

10.3 ಅಪವರ್ತನ ವಿಧಾನದಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು.

ನೆನಪಿಡಿ: $ax^2 + bx + c$ ವರ್ಗ ಬಹುಪದೋಕ್ತಿಯ ಶೂನ್ಯತೆಗಳು ಮತ್ತು $ax^2 + bx + c = 0$ ವರ್ಗ ಸಮೀಕರಣದ ಮೂಲಗಳು ಒಂದೇ ಆಗಿರುತ್ತವೆ

ಉದಾಹರಣೆ 3 : ಅಪವರ್ತನ ವಿಧಾನದಿಂದ $2x^2 - 5x + 3 = 0$ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

$2x^2 - 5x + 3 = 0$

$\Rightarrow 2x^2 - 2x - 3x + 3 = 0$

$\Rightarrow 2x(x-1) - 3(x-1) =$

$\Rightarrow (x-1)(2x-3) = 0$

$\Rightarrow x - 1 = 0, \quad 2x - 3 = 0$

$\Rightarrow x = 1, \ 2x = 3$

$x = 1, \ x = \frac{3}{2}$

ಮೊದಲ ಪದ = $2x^2$,ಕಡೆಯ ಪದ $= +3$
ಅವುಗಳ ಗುಣಲಬ್ಧ = $+6x^2$
ಮಧ್ಯದ ಪದ = $-5x$
ಗುಣಲಬ್ಧ = $+6x^2$ ಮತ್ತು ಮೊತ್ತ $-5x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-5x = -2x - 3x$

ಉದಾಹರಣೆ 4: $6x^2 - x - 2 = 0$ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

$6x^2 - x - 2 = 0$

$6x^2 - 4x + 3x - 2 = 0$

$2x(3x-2) + 1(3x-2) = 0$

$(2x+1)(3x-2) = 0$

$2x + 1 = 0, 3x - 2 =$

$2x = -1, 3x = 2$

$x = \frac{-1}{2}, x = \frac{2}{3}$

ಮೊದಲ ಪದ = $6x^2$,ಕಡೆಯ ಪದ $= -2$
ಅವುಗಳ ಗುಣಲಬ್ಧ = $-12x^2$
ಮಧ್ಯದ ಪದ = $-x$
ಗುಣಲಬ್ಧ = $-12x^2$ ಮತ್ತು ಮೊತ್ತ $-x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-x = -4x + 3x$

ಉದಾಹರಣೆ 5 : $3x^2 - 2\sqrt{6}\,x + 2 = 0$ ವರ್ಗ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

$\mathbf{3x^2 - 2\sqrt{6}\,x + 2 = 0}$

$3x^2 - \sqrt{6}\,x - \sqrt{6}\,x + 2 = 0$

$(\sqrt{3})^2 x^2 - \sqrt{2}.\sqrt{3}\,x - \sqrt{2}.\sqrt{3}\,x + (\sqrt{2})^2 = 0$

$\sqrt{3}\,x(\sqrt{3}\,x - \sqrt{2}) - \sqrt{2}(\sqrt{3}\,x - \sqrt{2}) = 0$

$(\sqrt{3}\,x - \sqrt{2})(\sqrt{3}\,x - \sqrt{2}) = 0$

$(\sqrt{3}\,x - \sqrt{2}) = 0, \ (\sqrt{3}\,x - \sqrt{2}) = 0$

$\sqrt{3}\,x = \sqrt{2}, \ \sqrt{3}\,x = \sqrt{2}$

$x = \sqrt{\frac{2}{3}}, \ x = \sqrt{\frac{2}{3}}$

ಮೊದಲ ಪದ = $3x^2$,ಕಡೆಯ ಪದ $= +2$
ಅವುಗಳ ಗುಣಲಬ್ಧ = $6x^2$
ಮಧ್ಯದ ಪದ = $-2\sqrt{6}\,x$
ಗುಣಲಬ್ಧ = $6x^2$ ಮತ್ತು ಮೊತ್ತ $-2\sqrt{6}\,x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-2\sqrt{6}\,x = \sqrt{6}\,x - \sqrt{6}\,x$

ಉದಾಹರಣೆ 6 : ವಿಭಾಗ 10.1 ರಲ್ಲಿ ಚರ್ಚಿಸಲಾದ ಪ್ರಾರ್ಥನಾ ಮಂದಿರದ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ.

ಧರ್ಮದರ್ಶಿಯೊಬ್ಬರು ಒಂದು ಪ್ರಾರ್ಥನಾ ಮಂದಿರವನ್ನು ನಿರ್ಮಿಸಲು ಬಯಸುತ್ತಾರೆ ಹಾಗೂ ಇದರ ಒಳಾಂಗಣ ವಿಸ್ತೀರ್ಣವು $300m^2$ ಆಗಿದ್ದು, ಉದ್ದವು ಅಗಲದ ಎರಡರಷ್ಟಕ್ಕಿಂತ 1m ಹೆಚ್ಚಾಗಿರಬೇಕೆಂದು ನಿರ್ಧರಿಸುತ್ತಾರೆ ಎಂದುಕೊಳ್ಳೋಣ. ಆ ಮಂದಿರದ ಉದ್ದ ಮತ್ತು ಅಗಲಗಳು ಎಷ್ಟಿರಬೇಕು?

$2x^2 + x - 300 = 0$

$2x^2 - 24x + 25x - 300 = 0$

$2x(x - 12) + 25(x - 12) = 0$

$(x - 12)(2x + 25) =$

$x - 12 = 0, \quad 2x + 25 = 0$

$x = 12, \quad 2x = -25$

$x = \frac{-25}{2} = -12.5$

ಅಗಲ $= x = 12\,m$

ಉದ್ದ $= 2x + 1 = 2(12) + 1 = 24 + 1 = 25\,m$

ಮೊದಲ ಪದ $= 2x^2$, ಕಡೆಯ ಪದ $= -300$
ಅವುಗಳ ಗುಣಲಬ್ಧ $= -600x^2$
ಮಧ್ಯದ ಪದ $= +x$
ಗುಣಲಬ್ಧ $= -600x^2$ ಮತ್ತು ಮೊತ್ತ $+x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$+x = -24x + 25x$

ಅಭ್ಯಾಸ 10.2

1. ಅಪವರ್ತನ ವಿಧಾನದಿಂದ ಕೆಳಗಿನ ವರ್ಗ ಸಮೀಕರಣಗಳ ಮೂಲಗಳನ್ನು ಕಂಡುಹಿಡಿಯಿರಿ.
   (i) $x^2 - 3x - 10 = 0$ (ii) $2x^2 + x - 6 = 0$
   (iii) $\sqrt{2}x^2 + 7x + 5\sqrt{2} = 0$ (iv) $2x^2 - x + \frac{1}{8} = 0$
   (v) $100x^2 - 20x + 1 = 0$
2. ಉದಾಹರಣೆ1 ರಲ್ಲಿ ನೀಡಿರುವ ಸಮಸ್ಯೆಗಳನ್ನು ಬಿಡಿಸಿ.
3. ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.
4. ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು 365 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.
5. ಒಂದು ಲಂಬಕೋನ ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 7cm ಕಡಿಮೆ ಇದೆ. ಅದರ ವಿಕರ್ಣದ ಉದ್ದವು 13cm ಆದರೆ ಉಳಿದೆರಡು ಬಾಹುಗಳ ಉದ್ದಗಳನ್ನು ಕಂಡುಹಿಡಿಯಿರಿ.
6. ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಮಡಿಕೆಗಳನ್ನು ತಯಾರಿಸುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚವು (ರೂಪಾಯಿಗಳಲ್ಲಿ), ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯ ಎರಡರಷ್ಟಕ್ಕಿಂತ 3 ಹೆಚ್ಚಾಗಿರುವುದನ್ನು ಗಮನಿಸಲಾಯಿತು. ಆ ದಿನದ ಒಟ್ಟು ಉತ್ಪಾದನಾ ವೆಚ್ಚವು ರೂ 90 ಆದರೆ ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯನ್ನು ಹಾಗೂ ಪ್ರತಿ ಮಡಿಕೆಯ ವೆಚ್ಚವನ್ನು ಕಂಡುಹಿಡಿಯಿರಿ.

ಪರಿಹಾರ

1. ಅಪವರ್ತನ ವಿಧಾನದಿಂದ ಕೆಳಗಿನ ವರ್ಗ ಸಮೀಕರಣಗಳ ಮೂಲಗಳನ್ನು ಕಂಡುಹಿಡಿಯಿರಿ.

(i) $x^2 - 3x - 10 = 0$ (ii) $2x^2 + x - 6 = 0$

(iii) $\sqrt{2}x^2 + 7x + 5\sqrt{2} = 0$ (iv) $2x^2 - x + \frac{1}{8} = 0$

(v) $100x^2 - 20x + 1 = 0$

(i) $\boldsymbol{x^2 - 3x - 10 = 0}$

$x^2 - 5x + 2x - 10 = 0$

$x(x - 5) + 2(x - 5) = 0$

$(x - 5)(x + 2) = 0$

$(x - 5) = 0, (x + 2) = 0$

$x = 5, x = -2$

ಮೊದಲ ಪದ $= x^2$, ಕಡೆಯ ಪದ $= -10$
ಅವುಗಳ ಗುಣಲಬ್ಧ $= -10x^2$
ಮಧ್ಯದ ಪದ $= -3x$
ಗುಣಲಬ್ಧ $= -10x^2$ ಮತ್ತು ಮೊತ್ತ $-3x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-3x = -5x + 2x$

(ii) $2x^2+x-6=0$

$2x^2+x-6=0$

$2x^2+4x-3x-6=0$

$2x(x+2)-3(x+2)=0$

$(x+2)(2x-3)=0$

$x+2=0, 2x-3=0$

$x=-2, 2x=3$

$x=-2, x=\frac{3}{2}$

ಮೊದಲ ಪದ $=2x^2$,ಕಡೆಯ ಪದ $=-6$
ಅವುಗಳ ಗುಣಲಬ್ಧ = $-12x^2$
ಮಧ್ಯದ ಪದ = $+x$
ಗುಣಲಬ್ಧ = $-12x^2$ ಮತ್ತು ಮೊತ್ತ $+x$
ಇರುವಂತೆ ಮಧ್ಯದ ಪದ ಬಿಡಿಸಿದಾಗ
$+x=+4x-3x$

(iii) $\sqrt{2}x^2+7x+5\sqrt{2}=0$

$\sqrt{2}x^2+2x+5x+5\sqrt{2}=0$

$\sqrt{2}x(x+\sqrt{2})+5(x+\sqrt{2})=0$

$(\sqrt{2}x+5)(x+\sqrt{2})=0$

$\sqrt{2}x+5=0,\ x+\sqrt{2}=0$

$\sqrt{2}x=-5,\ x=-\sqrt{2}$

$x=\frac{-5}{\sqrt{2}},\quad x=-\sqrt{2}$

ಮೊದಲ ಪದ $=+\sqrt{2}x^2$,ಕಡೆಯ ಪದ $=+5\sqrt{2}$
ಅವುಗಳ ಗುಣಲಬ್ಧ = $+10x^2$
ಮಧ್ಯದ ಪದ = $+7x$
ಗುಣಲಬ್ಧ = $+10x^2$ ಮತ್ತು ಮೊತ್ತ $+7x$
ಇರುವಂತೆ ಮಧ್ಯದ ಪದ ಬಿಡಿಸಿದಾಗ
$+7x=+2x+5x$

(iv) $2x^2-x+\frac{1}{8}=0$

$16x^2-8x+1=0$

$16x^2-4x-4x+1=$

$4x(4x-1)-1(4x-1)=0$

$(4x-1)(4x-1)=0$

$4x-1=0,\qquad 4x-1=0$

$4x=1, 4x=1$

$x=\frac{1}{4},\ x=\frac{1}{4}$

ಮೊದಲ ಪದ $=+16x^2$,ಕಡೆಯ ಪದ $=+1$
ಅವುಗಳ ಗುಣಲಬ್ಧ = $+16x^2$
ಮಧ್ಯದ ಪದ = $-8x$
ಗುಣಲಬ್ಧ = $+16x^2$ ಮತ್ತು ಮೊತ್ತ $-8x$
ಇರುವಂತೆ ಮಧ್ಯದ ಪದ ಬಿಡಿಸಿದಾಗ
$-8x=-4x-4x$

(v) $100x^2-20x+1=0$

$100x^2-20x+1=0$

$100x^2-10x-10x+1=0$

$10x(10x-1)-1(10x-1)=0$

$(10x-1)(10x-1)=0$

$10x-1=0, 10x-1=0$

$10x=1, 10x=1$

$x=\frac{1}{10},\ x=\frac{1}{10}$

ಮೊದಲ ಪದ $=+100x^2$,ಕಡೆಯ ಪದ $=+1$
ಅವುಗಳ ಗುಣಲಬ್ಧ = $+100x^2$
ಮಧ್ಯದ ಪದ = $-20x$
ಗುಣಲಬ್ಧ = $+100x^2$ ಮತ್ತು ಮೊತ್ತ $-20x$
ಇರುವಂತೆ ಮಧ್ಯದ ಪದ ಬಿಡಿಸಿದಾಗ
$-20x=-10x-10x$

2. ಉದಾಹರಣೆ1 ರಲ್ಲಿ ನೀಡಿರುವ ಸಮಸ್ಯೆಗಳನ್ನು ಬಿಡಿಸಿ.

(i) ಜಾನ್‌ನ ಗೋಲಿಗಳ ಸಂಖ್ಯೆ $=x$

ಜೀವನ್‌ನ ಗೋಲಿಗಳ ಸಂಖ್ಯೆ $=45-x$

5 ಗೋಲಿಗಳನ್ನು ಕಳೆದುಕೊಂಡ ನಂತರ

ಜಾನ್‌ನ ಗೋಲಿಗಳ ಸಂಖ್ಯೆ $=x-5$

ಜೀವನ್‌ನ ಗೋಲಿಗಳ ಸಂಖ್ಯೆ $=45-x-5=40-x$

ಅವರ ಗೋಲಿಗಳ ಗುಣಲಬ್ಧ $=124$

$\therefore (x-5)(40-x)=124$

$40x-x^2-200+5x=124$

$-x^2 + 45x - 200 - 124 = 0$
$-x^2 + 45x - 324 = 0 \times -1$
$\mathbf{x^2 - 45x + 324 = 0}$
$x^2 - 36x - 9x + 324 = 0$
$x(x - 36) - 9(x - 36) = 0$
$(x - 36)(x - 9) = 0$
$(x - 36) = 0, \quad (x - 9) = 0$
$x = 36, \quad x = 9$

ಮೊದಲ ಪದ $= +x^2$, ಕಡೆಯ ಪದ $= +324$
ಅವುಗಳ ಗುಣಲಬ್ಧ $= +324x^2$
ಮಧ್ಯದ ಪದ $= -45x$
ಗುಣಲಬ್ಧ $= +324x^2$ ಮತ್ತು ಮೊತ್ತ $-45x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-45x = -36x - 9x$

ಜಾನ್‌ನ ಗೋಲಿಗಳ ಸಂಖ್ಯೆ $= x = 36$
ಜೀವನ್‌ನ ಗೋಲಿಗಳ ಸಂಖ್ಯೆ $= 45 - x = 45 - 36 = 9$
ಅಥವಾ
ಜಾನ್‌ನ ಗೋಲಿಗಳ ಸಂಖ್ಯೆ $= x = 9$
ಜೀವನ್‌ನ ಗೋಲಿಗಳ ಸಂಖ್ಯೆ $= 45 - x = 45 - 9 = 36$

(ii) ಗೊಂಬೆಗಳ ಸಂಖ್ಯೆ $= x$
ಪ್ರತಿಯೊಂದು ಗೊಂಬೆ ತಯಾರಿಸಲು ತಗಲುವ ವೆಚ್ಚ $= (55 - x)$ ರೂ
ಒಟ್ಟು ಗೊಂಬೆಗಳ ಬೆಲೆ $= 750$ ರೂ
$\therefore x(55 - x) = 750$
$55x - x^2 = 750$
$-x^2 + 55x - 750 = 0 \times -1$
$\mathbf{x^2 - 55x + 750 = 0}$
$x^2 - 25x - 30x + 750 = 0$
$x(x - 25) - 30(x - 25) = 0$
$(x - 25)(x - 30) = 0$
$(x - 25) = 0, \quad (x - 30) = 0$
$x = 25, \quad x = 30$
ಗೊಂಬೆಗಳ ಸಂಖ್ಯೆ 25 ಅಥವಾ 30

ಮೊದಲ ಪದ $= +x^2$, ಕಡೆಯ ಪದ $= +750$
ಅವುಗಳ ಗುಣಲಬ್ಧ $= +750x^2$
ಮಧ್ಯದ ಪದ $= -55x$
ಗುಣಲಬ್ಧ $= +750x^2$ ಮತ್ತು ಮೊತ್ತ $-55x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-55x = -25x - 30x$

3. ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಮೊದಲನೇ ಸಂಖ್ಯೆ $= x$ ಆದರೆ ಎರಡನೇ ಸಂಖ್ಯೆ $= 27 - x$ ಆಗುತ್ತದೆ.
ಅವುಗಳ ಗುಣಲಬ್ಧ $= 182$
$\therefore x(27 - x) = 182$
$27x - x^2 = 182$
$-x^2 + 27x - 182 = 0 \times -1$
$\mathbf{x^2 - 27x + 182 = 0}$
$x^2 - 13x - 14x + 182 = 0$
$x(x - 13) - 14(x - 13) = 0$
$(x - 13)(x - 14) = 0$
$(x - 13) = 0, \quad (x - 14) = 0$
$x = 13, x = 14$

ಮೊದಲ ಪದ $= +x^2$, ಕಡೆಯ ಪದ $= +182$
ಅವುಗಳ ಗುಣಲಬ್ಧ $= +182x^2$
ಮಧ್ಯದ ಪದ $= -27x$
ಗುಣಲಬ್ಧ $= +182x^2$ ಮತ್ತು ಮೊತ್ತ $-27x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-27x = -13x - 14x$

ಮೊದಲನೇ ಸಂಖ್ಯೆ $= 13$ ಆದರೆ ಎರಡನೇ ಸಂಖ್ಯೆ $=$
$27 - 13 = 14$ ಆಗುತ್ತದೆ.
ಮೊದಲನೇ ಸಂಖ್ಯೆ $= 14$ ಆದರೆ ಎರಡನೇ ಸಂಖ್ಯೆ $= 27 - 14 = 13$ ಆಗುತ್ತದೆ.
ಆದ್ದರಿಂದ ಆ ಸಂಖ್ಯೆಗಳ 13 ಮತ್ತು 14

4. ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು 365 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಒಂದು ಧನಸಂಖ್ಯೆ x ಆಗಿರಲಿ, ಮತ್ತೊಂದು ಕ್ರಮಾಗತ ಧನಸಂಖ್ಯೆ $= x+1$ ಆಗಿರುತ್ತದೆ.

$x^2 + (x+1)^2 = 365$

$x^2 + x^2 + 2x + 1 = 35$

$2x^2 + 2x + 1 - 365 = 0$

$2x^2 + 2x - 364 = 0 \div 2$

$\mathbf{x^2 + x - 182 = 0}$

$x^2 + 14x - 13x - 182 = 0$

$x(x+14) - 13(x+14) = 0$

$(x+14)(x-13) = 0$

$(x+14) = 0, (x-13) = 0$

$x = -14 , x = 13$

$\therefore x + 1 = 13 + 1 = 14$

ಕ್ರಮಾಗತ ಎರಡು ಧನ ಸಂಖ್ಯೆಗಳು 13, 14 ಆಗಿವೆ.

ಮೊದಲ ಪದ $=+x^2$,ಕಡೆಯ ಪದ $=-182$
ಅವುಗಳ ಗುಣಲಬ್ಧ $= -182x^2$
ಮಧ್ಯದ ಪದ $= +x$
ಗುಣಲಬ್ಧ $= -182x^2$ ಮತ್ತು ಮೊತ್ತ $+x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$+\ x = +14x - 13x$

5. ಒಂದು ಲಂಬಕೋನ ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 7cm ಕಡಿಮೆ ಇದೆ. ಅದರ ವಿಕರ್ಣದ ಉದ್ದವು 13cm ಆದರೆ ಉಳಿದೆರಡು ಬಾಹುಗಳ ಉದ್ದಗಳನ್ನು ಕಂಡುಹಿಡಿಯಿರಿ.

ಲಂಬಕೋನ ತ್ರಿಭುಜದ ಪಾದ $BC = x\ cm$

ಎತ್ತರ $AB = (x-7)cm$

ಪೈಥಾಗೋರಸ್ ಪ್ರಮೇಯದ ಪ್ರಕಾರ

$BC^2 + AB^2 = AC^2$

$x^2 + (x-7)^2 = 13^2$

$x^2 + x^2 + 7^2 - 2(x)(7) = 169$

$2x^2 - 14x + 49 - 169 = 0$

$2x^2 - 14x - 120 = 0 \div 2$

$\mathbf{x^2 - 7x - 60 = 0}$

$x^2 - 12x + 5x - 60 = 0$

$x(x-12) + 5(x-12) = 0$

$(x-12)(x+5) = 0$

$(x-12) = 0, \quad (x+5) = 0$

$x = 12, \ x = -5$

ಲಂಬಕೋನ ತ್ರಿಭುಜದ ಪಾದ $BC = x = 12\ cm$

ಎತ್ತರ $AB = (x-7) = 12 - 7 = 5cm$



ಮೊದಲ ಪದ $=+x^2$,ಕಡೆಯ ಪದ $=-60$
ಅವುಗಳ ಗುಣಲಬ್ಧ $= -60x^2$
ಮಧ್ಯದ ಪದ $= -7\ x$
ಗುಣಲಬ್ಧ $= -60x^2$ ಮತ್ತು ಮೊತ್ತ $-7x$ ಇರುವಂತೆ ಮಧ್ಯದ ಪದ ಬಿಡಿಸಿದಾಗ
$-7x = -12x + 5x$

6. ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಮಡಿಕೆಗಳನ್ನು ತಯಾರಿಸುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚವು (ರೂಪಾಯಿಗಳಲ್ಲಿ), ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯ ಎರಡರಷ್ಟಕ್ಕಿಂತ 3 ಹೆಚ್ಚಾಗಿರುವುದನ್ನು ಗಮನಿಸಲಾಯಿತು. ಆ ದಿನದ ಒಟ್ಟು ಉತ್ಪಾದನಾ ವೆಚ್ಚವು ರೂ 90 ಆದರೆ ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯನ್ನು ಹಾಗೂ ಪ್ರತಿ ಮಡಿಕೆಯ ವೆಚ್ಚವನ್ನು ಕಂಡುಹಿಡಿಯಿರಿ.

ಮಡಿಕೆಗಳ ಸಂಖ್ಯೆ $= x$

ತಗಲುವ ವೆಚ್ಚ $= (2x+3)$ ರೂ

$\therefore x(2x+3) = 90$

$\mathbf{2x^2 + 3x - 90 = 0}$

$2x^2 + 15x - 12x - 90 = 0$

$x(2x+15) - 6(2x+15) = 0$

$(2x+15)(x-6)=0$
$(2x+15)=0, (x-6)=0$
$2x=-15, \ x=6$
$x=\frac{-15}{2}, x=6$
ವಸ್ತುಗಳ ಸಂಖ್ಯೆ $=x=6$
ತಗಲುವ ವೆಚ್ಚ $=(2x+3)$
$=2(6)+3=12+3=15$ ರೂ

ಮೊದಲ ಪದ $=+2x^2$,ಕಡೆಯ ಪದ $=-90$
ಅವುಗಳ ಗುಣಲಬ್ಧ = $-90x^2$
ಮಧ್ಯದ ಪದ = $+3x$
ಗುಣಲಬ್ಧ = -90 ಮತ್ತು ಮೊತ್ತ $+3x$
ಇರುವಂತೆ ಮಧ್ಯದ ಪದ ಬಿಡಿಸಿದಾಗ
$+3x = +15x - 12x$

10.4 ವರ್ಗ ಪೂರ್ಣಗೊಳಿಸುವುದರಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು.

ಉದಾಹರಣೆ:

$3x^2-5x+2=0$ ವರ್ಗಪೂರ್ಣಗೊಳಿಸುವ ವಿಧಾನದಿಂದ ಬಿಡಿಸಿ.

$3x^2-5x+2=0 \qquad \times 3$
$9x^2-15x+6=0$
$9x^2-15x=-6$
ಎರಡೂ ಕಡೆ b^2ನ್ನು ಸೇರಿಸಬೇಕು
$(3x)^2-2(3x)\left(\frac{5}{2}\right)+\left(\frac{5}{2}\right)^2=-6+\left(\frac{5}{2}\right)^2$
$\left(3x-\frac{5}{2}\right)^2=-6+\frac{25}{4}$
$\left(3x-\frac{5}{2}\right)^2=\frac{-24+25}{4}$
$\left(3x-\frac{5}{2}\right)^2=\frac{1}{4}$
$\left(3x-\frac{5}{2}\right)=\pm\sqrt{\frac{1}{4}}$
$\left(3x-\frac{5}{2}\right)=\pm\frac{1}{2}$
$3x=\pm\frac{1}{2}+\frac{5}{2}$
$3x=\frac{\pm 1+5}{2}$
$x=\frac{1+5}{6}, \ x=\frac{-1+5}{6}$
$x=\frac{6}{6}, \ x=\frac{4}{6}$
$x=1, \ x=\frac{2}{3}$

$2ab = 15x$
$2(3x)b = 15x$
$b=\frac{15x}{6x}=\frac{5}{2}$
$b^2=\left(\frac{5}{2}\right)^2$

ಉದಾಹರಣೆ 7 : ಉದಾಹರಣೆ 3ರಲ್ಲಿ ನೀಡಿದ ಸಮೀಕರಣವನ್ನು ವರ್ಗ ಪೂರ್ಣಗೊಳಿಸುವ ವಿಧಾನದಿಂದ ಬಿಡಿಸಿ.

$2x^2-5x+3=0$ ವರ್ಗಪೂರ್ಣಗೊಳಿಸುವ ವಿಧಾನದಿಂದ ಬಿಡಿಸಿ.

$2x^2-5x+3=0 \qquad \times 2$
$4x^2-10x+6=0$
$4x^2-10x=-6$
ಎರಡೂ ಕಡೆ b^2ನ್ನು ಸೇರಿಸಬೇಕು
$(2x)^2-2(2x)\left(\frac{5}{2}\right)+\left(\frac{5}{2}\right)^2=-6+\left(\frac{5}{2}\right)^2$
$\left(2x-\frac{5}{2}\right)^2=-6+\frac{25}{4}$
$\left(2x-\frac{5}{2}\right)^2=\frac{-24+25}{4}$

$2ab = 10x$
$2(2x)b = 15x$
$b=\frac{10x}{4x}=\frac{5}{2}$
$b^2=\left(\frac{5}{2}\right)^2$

$\left(2x-\frac{5}{2}\right)^2=\frac{1}{4}$

$\left(2x-\frac{5}{2}\right)=\pm\sqrt{\frac{1}{4}}$

$\left(2x-\frac{5}{2}\right)=\pm\frac{1}{2}$

$2x=\pm\frac{1}{2}+\frac{5}{2}$

$2x=\frac{\pm1+1}{2}$

$x=\frac{1+5}{4},\ x=\frac{-1+5}{4}$

$x=\frac{6}{4},\ x=\frac{4}{4}$

$x=\frac{3}{2},\ x=1$

ಉದಾಹರಣೆ 8:$5x^2$ - 6x - 2 = 0 ಸಮೀಕರಣದ ಮೂಲಗಳನ್ನು ವರ್ಗ ಪೂರ್ಣಗೊಳಿಸುವ ವಿಧಾನದಿಂದ ಬಿಡಿಸಿ.

$5x^2$ - 6x - 2 = 0 x 5

$25x^2-30x-10=0$ ವರ್ಗ ಪೂರ್ಣಗೊಳಿಸುವ ವಿಧಾನದಿಂದ ಬಿಡಿಸಿ.

$25x^2-30x=10$

ಎರಡೂ ಕಡೆ b^2ನ್ನು ಸೇರಿಸಬೇಕು

$25x^2-30x+(3)^2=10+(3)^2$

$(5x)^2-2(5x)(3)+(3)^2=10+9$

$(5x-3)^2=19$

$(5x-3)=\pm\sqrt{19}$

$5x=3\pm\sqrt{19}$

